ಸಂಪಾದಕರು: ರವಿಕುಮಾರ್ ಸಿ.ಹೆಚ್.

ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

# ಸೂರ್ಯ ಪ್ರಗತಿ

SURYAPRAGATHI Kannada Daily

ಪ್ರತಿ ಸುದ್ದಿಯ ಧ್ವನಿ

suryapragathi2021@gmail.com Mob: 9901010109 RNI:KARKAN/2021/80805 L2/RNP-1285/TMR/2025-27

Volume: 05 Issue:23 Date: 01-02-2026 Sunday RNI NO : KARKAN/2021/80805 L2/RNP-1285/TMR/2025-27 Page :4 Price: 1.00

ಸಂಪುಟ: 05 ಸಂಚಿಕೆ: 23 ಪುಟ : 4 ಬೆಲೆ: 1.00 ರೂ

## ಕೇಂದ್ರದ ತೆರಿಗೆ ಪಾಲು ಬಾರದಿದ್ದರೆ 'ನ್ಯಾಯಕ್ಕಾಗಿ ಕನ್ನಡಿಗರ ಹೋರಾಟ' ಅಭಿಯಾನ: ಸಿಎಂ,ಸಿದ್ದರಾಮಯ್ಯ

ಬೆಂಗಳೂರು: ಕೇಂದ್ರ ಸರ್ಕಾರದಿಂದ ಕರ್ನಾಟಕಕ್ಕೆ ಸಿಗಬೇಕಾದ ನ್ಯಾಯಯುತ ತೆರಿಗೆ ಪಾಲು, ಪ್ರಾಕೃತಿಕ ವಿಕೋಪ ಪರಿಹಾರ ನಿಧಿ ಹಾಗೂ ವಿಶೇಷ ಅನುದಾನ ಸೇರಿದಂತೆ ಪ್ರಮುಖ ಬೇಡಿಕೆಗಳನ್ನು 16ನೇ ಹಣಕಾಸು ಆಯೋಗದ ಮುಂದೆ ಸಿಎಂ ಸಿದ್ದರಾಮಯ್ಯ ಮಂಡಿಸಿದ್ದು, ಈ ಕುರಿತು 'ನ್ಯಾಯಕ್ಕಾಗಿ ಕನ್ನಡಿಗರ ಹೋರಾಟ' ಎಂಬ ಹೆಸರಿನಲ್ಲಿ ಅಭಿಯಾನವನ್ನು ಆರಂಭಿಸಿದ್ದಾರೆ.




ಈ ಕುರಿತು ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಸರಣಿಯಾಗಿ ಪೋಸ್ಟ್ ಹಂಚಿಕೊಂಡಿರುವ ಅವರು, ಹಲವು ಬೇಡಿಕೆಗಳನ್ನು ಮಂಡಿಸಿದ್ದಾರೆ. ಕರ್ನಾಟಕದ ಆರ್ಥಿಕ ಸ್ಥಿತಿಯನ್ನು ನೋಡಿದರೆ, 14ನೇ ಹಣಕಾಸು ಆಯೋಗಕ್ಕೆ ಹೋಲಿಸಿದರೆ 15ನೇ ಹಣಕಾಸು ಆಯೋಗದ ವರದಿಯಿಂದಾಗಿ ಶೇ 23ರಷ್ಟು ತೆರಿಗೆ ಪಾಲು ನೇರವಾಗಿ ಕಡಿಮೆಯಾಯಿತು. ಕೆಲವು ಆರ್ಥಿಕ ಅಜ್ಞಾನಿಗಳು ಈ ಸಂಗತಿಯನ್ನು ಅರ್ಥ ಮಾಡಿಕೊಳ್ಳದೆ ವಿತಂಡವಾದ ಮಾಡುತ್ತಾರೆ.

14ನೇ ಹಣಕಾಸು ಆಯೋಗವು ಶೇ 4.71ರಷ್ಟು ಪಾಲನ್ನು ನಮಗೆ ಒದಗಿಸಿತ್ತು. 15ನೇ ಹಣಕಾಸು ಆಯೋಗವು ಇದನ್ನು ಶೇ 3.64ಕ್ಕೆ ಇಳಿಸುವ ಮೂಲಕ ಘೋರ ಅನ್ಯಾಯ ಮಾಡಿತು. ಉದಾಹರಣೆಗೆ, ರಾಜ್ಯಗಳಿಗೆ ಹಂಚಿಕೆ ಮಾಡುವ 100 ರೂಪಾಯಿಯಲ್ಲಿ ಮೊದಲು ಕರ್ನಾಟಕಕ್ಕೆ ರೂ.4.71 ಸಿಗುತ್ತಿದ್ದರೆ, 15ನೇ ಆಯೋಗವು ಅದನ್ನು ರೂ.3.64ಗೆ ಇಳಿಸಿತು. ಇದರಿಂದ ರಾಜ್ಯಕ್ಕೆ ನೇರವಾಗಿ ಸುಮಾರು ರೂ.80 ಸಾವಿರ ಕೋಟಿಯಷ್ಟು ಬೃಹತ್ ಪ್ರಮಾಣದ ತೆರಿಗೆ ಪಾಲು ಸಿಗದೆ ಅನ್ಯಾಯವಾಯಿತು.

ದೇಶದ ಆರ್ಥಿಕ ಶಕ್ತಿಯಲ್ಲಿ ಚಾಲಕ ಸ್ಥಾನದಲ್ಲಿರುವ ಕರ್ನಾಟಕ ತಲಾವಾರು ಆರ್ಥಿಕ ಉತ್ಪಾದಕತೆಯಲ್ಲಿ ಮೊದಲ ಸ್ಥಾನದಲ್ಲಿದೆ. ತೆರಿಗೆ, ಸೆಸ್ ಮುಂತಾದ ರೂಪದಲ್ಲಿ ಕೇಂದ್ರ ಸರ್ಕಾರವು ಕರ್ನಾಟಕದಿಂದ ರೂ.4.5 ಲಕ್ಷ ಕೋಟಿಯಿಂದ ರೂ.5 ಲಕ್ಷ ಕೋಟಿಗಳಷ್ಟು ಸಂಗ್ರಹಿಸುತ್ತದೆ. ರಾಜ್ಯದ ಒಟ್ಟಾರೆ ಆಯವ್ಯಯದಲ್ಲಿ ಇಡೀ ದೇಶದಲ್ಲಿಯೇ ಕೇಂದ್ರದಿಂದ ಅತ್ಯಂತ ಕಡಿಮೆ ತೆರಿಗೆ ಪಾಲು ಮತ್ತು ಅನುದಾನ ಪಡೆಯುವ ರಾಜ್ಯವೂ ಕರ್ನಾಟಕವೇ ಆಗಿರುವುದು ದುರದೃಷ್ಟಕರ. ಈ ಹಿನ್ನೆಲೆಯಲ್ಲಿ ನಮಗೆ 14ನೇ ಹಣಕಾಸು ಆಯೋಗವು ನೀಡಿದ್ದ ಶೇ 4.71ರಷ್ಟು ಪಾಲನ್ನು ಕೊಟ್ಟರೆ ಮಾತ್ರ ನಾವು ನಿಟ್ಟುಸಿರು ಬಿಡುವಂತಾಗುತ್ತದೆ. ಅದಕ್ಕಿಂತ ಹೆಚ್ಚು ಕೊಟ್ಟರೆ ಮಾತ್ರ ನೈಜವಾಗಿ ನ್ಯಾಯ ಸಿಕ್ಕಂತಾಗುತ್ತದೆ ಎಂದು ಹೇಳಿದ್ದಾರೆ.

ಬೆಂಗಳೂರಿನ ಮೂಲ ಸೌಕರ್ಯ ಅಭಿವೃದ್ಧಿಗೆ ಮುಂದಿನ 5 ವರ್ಷಗಳಲ್ಲಿ ರೂ.1.15 ಲಕ್ಷ ಕೋಟಿಗಳಷ್ಟು ಹೂಡಿಕೆ ಅಗತ್ಯವಿದೆ. ಇದಕ್ಕಾಗಿ 16ನೇ ಹಣಕಾಸು ಆಯೋಗವು ಕನಿಷ್ಠ ರೂ.27,793 ಕೋಟಿಗಳನ್ನಾದರೂ ನೀಡುವಂತೆ ಶಿಫಾರಸು ಮಾಡಬೇಕು ಎಂದು ಮನವಿ ಮಾಡಿದ್ದಾರೆ.

## ಪೋಲಿಸ್ ಅಧಿಕಾರಿಯಿಂದ ದಲಿತ ಯುವಕನ ಮೇಲೆ ಹಲ್ಲೆ: ದಲಿತ ಮುಖಂಡರ ಪ್ರತಿಭಟನೆ

ತಿಪಟೂರು : ನಗರದ ಠಾಣೆ ಸಬ್ ಇನ್ಸೆಕ್ಟರ್ ಯತೀಶ್ ರವರು ದಲಿತ ಮುಖಂಡ ಕಂಚಾಘಟ್ಟ ಸುರೇಶ ಅವರ ಮಗನನ್ನು ಮನಸ್ಸ ಇಚ್ಚೆ ದಳಿಸಿ ಗೂಂಡ ರೀತಿ ಹಲ್ಲೆ ಮಾಡಿದ್ದಾರೆಂದು ಆರೋಪಿಸಿ ತಿಪಟೂರು ತಾಲೂಕು ಆಡಳಿತ ಮುಂಭಾಗ ಪ್ರತಿಭಟನೆ ನಡೆಸಿದರು.



ನಂತರ ಮಾನ್ಯ ಗೃಹ ಮಂತ್ರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಜಿ. ಪರಮೇಶ್ವರ್ ರವರಿಗೆ ತಿಪಟೂರು ತಾಲೂಕು ಉಪ ವಿಭಾಧಿಕಾರಿಗಳಾದ ಸಪ್ತ ಶ್ರೀ ರವರ ಮೂಲಕ ಮನವಿ ಸಲ್ಲಿಸಿದರು.ತಿಪಟೂರು ನಗರದ ಹಾಸನ ಸರ್ಕಲ್ ಅರಸೀಕೆರೆ ರೋಡ್ (206)ರಲ್ಲಿ ದಿನಾಂಕ 22/01/ 2026ನೇ ತಾರೀಕು ಗುರುವಾರ ರಾತ್ರಿ 11:10ರ ಸರಿಸುಮಾರು ಸಮಯದಲ್ಲಿ ಸುಮಾ ಬಾರ್ ಎದುರಿಗೆ ಮುಂದಿನ ರಸ್ತೆಯಲ್ಲಿ ನಿಂತಿದ್ದ ದಲಿತ ಜನಾಂಗದ ಸೇರಿದ ಸುಪ್ರೀಂ ಸೂರ್ಯ ಪೋನಿನಲ್ಲಿ ಮಾತನಾಡುತ್ತಿರುವಾಗ ತಿಪಟೂರು ನಗರದ ಸಬ್ ಇನ್ಸೆಕ್ಟರ್ ಯತೀಶ್ ರವರು ಜೀಪಿನಲ್ಲಿ ಆಗಮಿಸಿದ್ದು. ಈ ಯುವಕನಿಗೆ ಗುದ್ದುವ ರೀತಿ ಪಕ್ಕಕ್ಕೆ ಬಂದು ನಿಂತು ಏನು ಮಾಡುತ್ತೀಯಾ ಇಲ್ಲಿ ಎಂದಾಗ, ಅದಕ್ಕೆ ಅವನು ನನ್ನ ಚಿಕ್ಕಪ್ಪ ಡ್ರಿಂಕ್ಸ್ ತರಲು ಹೋಗಿದ್ದಾರೆ ಅದಕ್ಕೆ ಅವರನ್ನು ಕಾಯುತ್ತಿದ್ದದ್ದೇನೆ ಎಂದು ಉತ್ತರಿಸಿದಾಗ ನನ್ನ ಜೀಪ್ ಬಂದಿದ್ದು ನಿನ್ನ ಕಣ್ಣಿಗೆ ಕಾಣಲಿಲ್ಲವೇ ಎಂದು ನಿಂದಿಸುತ್ತಾ ಯಾವೂರು ನಿಂದು ಎಂದಾಗ ಕಂಚಾಘಟ್ಟ ಸುರೇಶ ರವರ ಮಗ ಎಂದಿದ್ದಾನೆ.

ಅದಕ್ಕೆ ನೀನು ಜೀಪ್ ಬಂದರು ಎಕ್ಕೆ ಮಾದಿಗನಂತೆ ನಿಂತಿರುವುರು ಎಂದಿದ್ದಾರೆ. ಆಗ ಅವನು ಯಾಕೆ ಸರ್ ಈ ರೀತಿ ಮಾತನಾಡುತ್ತೀರಾ ಎಂದಾಗ, ಸಬ್ ಇನ್ಸೆಕ್ಟರ್ ಆದ ಯತೀಶ್ ರವರು ಜೀಪಿನಿಂದ ಕೆಳಗಿಳಿದು ಸುಪ್ರೀಂ ಸೂರ್ಯ ನನ್ನು ಮನಸ್ಸು ಇಚ್ಚೆ ದಳಿಸಿ ಗುಂಡಾ ರೀತಿ ವರ್ತಿಸಿದ್ದಾರೆ. ಆ ಸಮಯದಲ್ಲಿ ಅಲ್ಲಿಂದ ಅವನು ಭಯ ಭೀತನಾಗಿ ಹೋಗುತ್ತಿರುವಾಗ ಪುನಃ ಹಿಂಬಾಲಿಸಿ ಆತನನ್ನ ಅವರ ಜೊತೆಯಲ್ಲಿದ್ದ ಪಿ.ಸಿ. ಮತ್ತು ಯತೀಶ್ ರವರು ಪ್ರಾಣಿಯಂತೆ ಆತನಿಗೆ ಪುನಃ ದಳಿಸುತ್ತಾ ಅವರ ಜೀಪಿನ ಕಡೆ ಕೊರಳು ಪಟ್ಟಿ ಹಿಡಿದು ಹೊಡೆದುಕೊಂಡು ಜೀಪ್ ಗೆ ಹತ್ತು ಎಂದು ಕಾಲಿನಿಂದ ಒದೆಯುತ್ತಾ ಜೀಪಿಗೆ ನೂಕಿ ಹತ್ತಿಸಿದ್ದಾರೆ.

ನಂತರ ಸುಮಾರು 10ನಿಮಿಷ ಜೀಪ್ ನಲ್ಲಿ ಇರಿಸಿ ಹಾಗೂ ಆತನನ್ನು ಠಾಣೆಗೆ ಕರೆದುಕೊಂಡು ಹೋಗಿ ಮೊಬೈಲ್ ಕಿತ್ತುಕೊಂಡು ಯಾರಿಗೂ ಪೋನ್ ಮಾಡದೆ ರಾತ್ರಿ ಎಲ್ಲಾ ಪೊಲೀಸ್ ಠಾಣೆಯಲ್ಲಿ ಇರಿಸಿಕೊಂಡಿದ್ದ ರಂತೆ ನಂತರ ಈ ವಿಚಾರ ತಂದೆಗೆ ತಿಳಿದಾಗ ಠಾಣೆ ಬಳಿ ಹೋಗಿ ನೋಡಿದಾಗ ಅವನನ್ನು ಯಾವುದೋ ಸ್ಮಗ್ಲರ ಮಾಡಿರುವ ತರ ಕೂರಿಸಿದ್ದನ್ನು ನೋಡಿ ಅಲ್ಲಿನ ಠಾಣೆಯಲ್ಲಿರುವ ಪಿ.ಸಿ.ಯನ್ನು ಕೇಳಿದಾಗ ಎಸ್.ಐ. ಅವರು ಕರೆದುಕೊಂಡು ಬಂದಿತ್ತಾರೆ ಎಂದು ತಿಳಿಸಿದ್ದಾರೆ. ನಂತರ ಎಸ್.ಐ. ರವರಿಗೆ ಫೋನ್ ಮಾಡಿದಾಗ ಫೋನ್ ಸಹ ಉತ್ತರಿಸದೆ ಹಾಗೂ ಯಾವುದೇ ಡ್ರಿಂಕ್ ಮಾಡಿ ಗಾಡಿ ಓಡಿಸದೆ ಇದ್ದರೂ ಈತನ ಮೇಲೆ ಕೇಸ್ ದಾಖಲಿಸಿರುತ್ತಾರೆ. ನನ್ನ ಮಗನ ಮೇಲೆ ಯಾವುದೇ ದೂರು ಇಲ್ಲದಿದ್ದರೂ ಅಮಾನೀಯವಾಗಿ ಗೂಂಡಾ ರೀತಿ ವರ್ತಿಸುತ್ತಿರುವ ಸಬ್ ಇನ್ಸೆಕ್ಟರ್ ಯತೀಶ್ ರವರ ಮೇಲೆ ಸೂಕ್ತವಾದ ತನಿಖೆ ನಡೆಸಿ ಬೇಕೆಂದು ಕಂಚಾಘಟ್ಟ ಸುರೇಶ ರವರು ತಿಳಿಸಿದ್ದಾರೆ.ಹಾಗೂ ಎಸ್. ಸಿ. ಎಸ್. ಟಿ. ಕಾಯ್ದೆ ಅಡಿ ಹಾಗೂ ಗೂಂಡಾ ಕಾಯ್ದೆ ಅಡಿ ಕೇಸ್ ದಾಖಲಿಸಿ ನೊಂದ ದಲಿತ ಯುವಕನಿಗೆ ನ್ಯಾಯ ಕೊಡಿಸಬೇಕೆಂದು ಕಂಚಾಘಟ್ಟ ಸುರೇಶ್ ರವರು ಹಾಗೂ ದಲಿತ ಪರ ಮುಖಂಡರುಗಳು ಪ್ರತಿಭಟನೆಯಲ್ಲಿ ಸಬ್ ಇನ್ಸೆಕ್ಟರ್ ಯತೀಶ್ ಅವರ ನಡವಳಿಕೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ಘಟನೆಯ ನಡೆದಿದ್ದು ಸುಮ ಬಾರ್ ಸಿ.ಸಿ. ಟಿವಿ ದೃಶ್ಯವನ್ನು ಸಂಘಟನೆಗಳು ಪಡೆದುಕೊಂಡಿದ್ದು. ಸೂಕ್ತ ದಾಖಲೆಯನ್ನು ನೀಡಿದ್ದು. ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿ ಕೂಡಲೇ ನ್ಯಾಯಯುತವಾದ ಕಾನೂನು ಕ್ರಮ ಜರುಗಿಸಿ ಬೇಕೆಂದು ದಲಿತ ಪರ ಮುಖಂಡರು ಒತ್ತಾಯಿಸಿದರು.

## ಮಾನಂಗಿಗೆ ಕುಡಿಯುವ ನೀರು ಸರಬರಾಜಿಗೆ ಡಿ.ಸಿ. ಸೂಚನೆ

ತುಮಕೂರು: ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅವರು ಶುಕ್ರವಾರ ಬೆಳಿಗ್ಗೆ ಶಿರಾ ತಾಲೂಕು ಭುವನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಾನಂಗಿ ಗ್ರಾಮಕ್ಕೆ ಭೇಟಿ ನೀಡಿ ತುರ್ತಾಗಿ ಕುಡಿಯುವ ನೀರು ಸರಬರಾಜು ಮಾಡಲು ಸೂಕ್ತ ಕ್ರಮವಹಿಸುವಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿದ್ದಾರೆ.



ಜಿಲ್ಲಾಧಿಕಾರಿಗಳ ಭೇಟಿ ಸಮಯದಲ್ಲಿ ಪ್ರಸ್ತುತ ಮಾನಂಗಿ ಗ್ರಾಮದ ಕುಡಿಯುವ ನೀರು ಸರಬರಾಜು ಕೊಳವೆ ಬಾವಿ ವಿಫಲವಾಗಿದ್ದು, ಖಾಸಗಿ ಕೊಳವೆ ಬಾವಿ ಮೂಲಕ ನೀರು ಸರಬರಾಜು ಮಾಡುತ್ತಿರುವುದಾಗಿ ಗ್ರಾಮಸ್ಥರು ಮಾಹಿತಿ ನೀಡಿದರು. ಗ್ರಾಮದ ಮನೆಗಳಿಗೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು, ಗ್ರಾಮ ನೈರ್ಮಲ್ಯ ಕುಡಿಯವ ನೀರು ಕುರಿತು ಚರ್ಚಿಸಿದರು ಹಾಗೂ ಗ್ರಾಮದ ಶಾಲೆಗೆ ಭೇಟಿ ನೀಡಿ ಮಕ್ಕಳಿಗೆ ನೀಡುತ್ತಿರುವ ಬೆಳಗಿನ ಸಾಯಿ ಶೂರ್ ಮಾಲ್ಟನ್ನು ತಾವು ಖುದ್ದು ಕುಡಿದು ಗುಣಮಟ್ಟ ಪರಿಶೀಲಿಸಿದರು. ಗ್ರಾಮಸ್ಥರು ತಮ್ಮ ಗ್ರಾಮಕ್ಕೆ ಕುಡಿಯುವ ನೀರಿನ ಘಟಕ ಮಂಜೂರು ಮಾಡಲು ಮನವಿ ಮಾಡಿದರು ಹಾಗೂ ಆಹಾರ ಇಲಾಖೆಯಿಂದ ತಮ್ಮ ಗ್ರಾಮದಲ್ಲಿರುವ ಆಹಾರ ವಿತರಣೆಗೆ ಅನುಕೂಲ ಮಾಡಿಕೊಡಲು ಕೋರಿದರು. ಈ ಕುರಿತು ತ್ವರಿತವಾಗಿ ಸೂಕ್ತ ಕ್ರಮವಹಿಸುವಂತೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಮಧುಗಿರಿ ವಿಭಾಗದ ಉಪ ವಿಭಾಗಾಧಿಕಾರಿ ಗೋಟೂರು ಶಿವಪ್ಪ, ತಹಶೀಲ್ದಾರ್, ಶಿರಾ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಸಹಾಯಕ ಕಾರ್ಯ ಪಾಲಕ ಅಭಿಯಂತರರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಸಿಬ್ಬಂದಿ, ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಗ್ರಾಮಸ್ಥರುಗಳು ಹಾಜರಿದ್ದರು.

## ಪ್ರಪಂಚ ನೋಡುವ ಮುನ್ನಾ ಪರಲೋಕ ಸೇರಿದ ನವಜಾತ ಶಿಶು

ತುಮಕೂರಿನಲ್ಲಿ ಕರುಳು ಹಿಂಡುವ ಘಟನೆ ನಡೆದಿದೆ. ಮದುವೆ ನಿಶ್ಚಿತಾರ್ಥಕ್ಕೆ ತೆರಳಿದ್ದ ತಾಯಿ ನವಜಾತ ಶಿಶುವನ್ನು ಸಂಬಂಧಿಕರ ಮನೆಯಲ್ಲಿ ಬಿಟ್ಟಿದ್ದರು. ಆರೋಗ್ಯ ಸಮಸ್ಯೆ ಉಂಟಾಗಿ ಮಗು ಮೃತಪಟ್ಟಿದೆ. ಈ ಘಟನೆ ಸಂಬಂಧ ತಾಯಿ, ತಂದೆ ಸೇರಿದಂತೆ ನಾಲ್ವರ ವಿರುದ್ಧ ಮಕ್ಕಳ ರಕ್ಷಣಾ ಘಟಕದ ದೂರು ಆಧರಿಸಿ ಎಫ್ಐಆರ್ ದಾಖಲಾಗಿದೆ.



ಮಗುವೊಂದು ಜನನವಾಗಿ ಕೇವಲ ಒಂದು ದಿನ ಕಳೆದಿತ್ತು. ಪಿಳಿಪಿಳಿ ಅಂತ ಬಿಡುತ್ತಿದ್ದ ಪುಟ್ಟ ಕಣ್ಣು ಅಮ್ಮನನ್ನು ಹುಡುಕುತ್ತಿತ್ತು. ತಾಯಿಯ ಅಕ್ಕರೆ ಬಯಸಿ ಅಳುತ್ತಿದ್ದ ಆ ಮಗುವಿನ ಬದುಕಿಗೆ ತಮ್ಮವರೇ ಶತ್ರುಗಳಾಗಿದ್ದಾರೆ. ತಿಳಿದೋ ಅಥವ ತಿಳಿಯದೆಯೋ ಆದ ತಪ್ಪಿಗೆ ಪುಟ್ಟ ಕಂದ ಕಣ್ಬಿಟ್ಟು ಪ್ರಪಂಚ ನೊಡುವ ಮುಂಚೆಯೇ ಶಾಶ್ವತವಾಗಿ ಕಣ್ಮುಚ್ಚಿದೆ. ಈ ಕರುಳು ಹಿಂಡುವ ಘಟನೆಗೆ ತುಮಕೂರುಜಿಲ್ಲೆ ಸಾಕ್ಷಿಯಾಗಿದೆ. ಮಗುವಿಗೆ ಜನ್ಮ ನೀಡಿದ ತಾಯಿ ಆ ಪುಟ್ಟ ಕಂದನ ಜೊತೆ ಹಾರೈಕೆಯಲ್ಲಿ ಇರಬೇಕು. ಆದರೇ ಇಲ್ಲಿ ಜನ್ಮ ನೀಡಿದ ತಾಯಿ ಮಗು ಜನಿಸಿದ ಮರು ದಿನವೇ ತನ್ನ ಸಹೋದರಿ ಮನೆಯಲ್ಲಿ ಬಿಟ್ಟು ಮದುವೆ ಸಂಭ್ರಮದಲ್ಲಿ ಭಾಗಿಯಾಗಿದ್ದಾಳೆ. ಈ ನಡುವೆ ಕಾಣಿಸಿಕೊಂಡ ಸಮಸ್ಯೆಯಿಂದ ಮಗು ಸಾವನ್ನಪ್ಪಿದೆ. ತುಮಕೂರು ನಗರದಲ್ಲಿ ಈ ಘಟನೆ ನಡೆದಿದೆ. ಮಕ್ಕಳ ರಕ್ಷಣಾ ಘಟಕ ಪೊಲೀಸರಿಗೆ ದೂರು ನೀಡಲಾಗಿದ್ದು, ದೂರು ಹಿನ್ನಲೆ ತುಮಕೂರು ಮಹಿಳಾ ಠಾಣೆಯಲ್ಲಿ ಮೃತ ನವಶಿಶುವಿನ ತಾಯಿ, ತಂದೆ ಸೇರಿದಂತೆ ನಾಲ್ವರ ವಿರುದ್ಧ ಎಫ್ ಐ ಆರ್ ದಾಖಲಾಗಿದೆ.

## ದೇಶಕ್ಕಾಗಿ ದುಡಿದ ಮಹನೀಯರನ್ನು ನೆನಪು ಮಾಡಿಕೊಳ್ಳುವ ದಿನವೇ ಸರ್ವೋದಯ ದಿನ

ತುಮಕೂರು: ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ ಮಹನೀಯರನ್ನು ನೆನಪು ಮಾಡಿಕೊಳ್ಳುವ ದಿನವೇ ಸರ್ವೋದಯ ದಿನವಾಗಿದೆ. ಈ ದಿನವನ್ನು ನ್ಯಾಯಾಂಗ ಇಲಾಖೆ ಸ್ವಚ್ಚತಾ ದಿನವನ್ನು ಆಚರಿಸಿಕೊಂಡು ಬರುತ್ತಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ನೂರುನ್ನಿಸಾ ತಿಳಿಸಿದ್ದಾರೆ.



ನಗರದ ಸರಕಾರಿ ಆಸ್ಪತ್ರೆಯ ಸಭಾಂಗಣದಲ್ಲಿ ಸ್ವಾಮಿ ವಿವೇಕಾನಂದ ಸಂಘಟಿತ ಗ್ರಾಮಾಂತರ ಆರೋಗ್ಯ ಕೇಂದ್ರ, ಶ್ರೀಶಾರದದೇವಿ ಕಣ್ಣಿನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ,ಪಾವಗಡ,ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ತುಮಕೂರು, ಜಿಲ್ಲಾ ಕುಷ್ಠ ರೋಗ ನಿರ್ಮೂಲಾನಾಧಿಕಾರಿಗಳು, ತುಮಕೂರು ಹಾಗೂ ಡೇಮಿಯನ್ ಫೌಂಡೇಷನ್, ಚನ್ನೈ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಸರ್ವೋದಯ ದಿನಾಚರಣೆ, ಹುತಾತ್ಮರ ದಿನಾಚರಣೆ ಹಾಗೂ ಸ್ಪರ್ಶ ಕುಷ್ಠರೋಗ ಜಾಗೃತಿ ಆಂದೋಲನ ಅಂಗವಾಗಿ ಕುಷ್ಠ ರೋಗಿಗಳಿಗೆ ವಿವಿಧ ಸಲಕರಣೆ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು,ಮಹನೀಯರ ತ್ಯಾಗ, ಬಲಿದಾನದ ಕುರಿತು ಮಕ್ಕಳಿಗೆ ತಿಳಿಸಬೇಕಾಗಿದೆ ಎಂದರು.

ಸ್ವಚ್ಚತೆ ಎಂಬುದು ಕೇವಲ ದೇಹ ಮತ್ತು ಮನಸ್ಸಿಗೆ ಸಂಬಂಧಿಸಿದಲ್ಲದೆ, ಆದು ಆತ್ಮದ ಶುದ್ದೀಗೂ ಸೇರಿದ್ದಾಗಿದೆ.ಯಾರ ಆತ್ಮ ಶುದ್ಧಿ ಇರುತ್ತದೆಯೋ, ಅವರು ಇತರರಿಗೆ ಮಾದರಿಯಾಗಿರುತ್ತಾರೆ.ದೇಹ ಮತ್ತು ಆತ್ಮದ ಶುದ್ದಿಗಾಗಿ ಅನೇಕ ಔಷಧಗಳನ್ನು ಬಳಸುತ್ತೇವೆ. ಆದರೆ ಆತ್ಮದ ಶುದ್ದಿಗೆ ಯಾವ ಔಷಧವೂ ಇಲ್ಲ. ಇತರರನ್ನು ನಮ್ಮಂತೆ ಕಾಣುವ,ಅಶಕ್ತರು, ಬಡವರನ್ನು ಕಂಡರೆ ಸಹಾಯ ಹಸ್ತ ಚಾಚುವ ಗುಣ ಆತ್ಮಶುದ್ದಿಗೆ ಮೂಲಮಂತ್ರವಾಗಿದೆ.ಅದು ಮನುಷ್ಯನಲ್ಲಿನ ರಾಕ್ಷಸತ್ವಗುಣವನ್ನು ತೊಲಗಿಸಿ, ದೈವತ್ವ ಗುಣಗಳನ್ನು ಬೆಳೆಸುತ್ತದೆ. ಈ ನಿಟ್ಟಿನಲ್ಲಿ ನಾವೆಲ್ಲರೂ ನಮ್ಮ ಕೈಲಾದಷ್ಟು ಬಡವರಿಗೆ, ಆಶಕ್ತರಿಗೆ ಸಹಾಯ ಮಾಡೋಣ ಎಂದು ನ್ಯೂರುನ್ನಿಸಾ ಸಲಹೆ ನೀಡಿದರು.

ಕೆಪಿಸಿಸಿ ಉಪಾಧ್ಯಕ್ಷರಾದ ಮುರುಳೀಧರ್ ಹಾಲಪ್ಪ ಮಾತನಾಡಿ,ವೈದ್ಯರಾಗಿದ್ದ ನಮ್ಮ ತಂದೆ, ಕುಷ್ಠ ರೋಗಿಗಳ ಬಗ್ಗೆ ನಮಗೆ ತಿಳುವಳಿಕೆ ನೀಡಿದ್ದರು.ಅದೊಂದು ಗುಣಪಡಿಸಬಹುದಾದ ಖಾಯಿಲೆ ಎಂಬುದನ್ನು ಮನವರಿಕೆ ಮಾಡಿಕೊಟ್ಟಿದ್ದರು. ಹಾಗಾಗಿಯೇ ನಾವು ಕಲಿಯುವಂತಹ ಸಂದರ್ಭದಲ್ಲಿಯೇ ಜಾಗೃತಿ ಮೂಡಿತ್ತು.ಪಾವಗಡದ ಶ್ರೀಜಪಾನಂದ ಶ್ರೀಗಳ ಸೇವೆಯನ್ನು ಹತ್ತಿರದಿಂದ ನೋಡಿದಾಗ ಮತ್ತಷ್ಟು ಗೌರವ ಭಾವನೆ ಅವರ ಬಗ್ಗೆ ಮೂಡಿದೆ.ಸ್ವತಹಃ ಅವರ ಕುಷ್ಠ ರೋಗಿಗಳಿಗೆ ಚಿಕಿತ್ಸೆ, ಔಷಧೋಪಚಾರ ಮಾಡಿ,ಖಾಯಿಲೆಯನ್ನು ವಾಸಿ ಮಾಡಿದ್ದಾರೆ.ಕುಷ್ಠ ರೋಗಿಗಳ ಸೇವೆಯ ಜೊತೆಗೆ, ಕ್ಷಯ,ಕಣ್ಣು, ಹೃದ್ರೋಗ ಸೇರಿದಂತೆ ಹಲವು ವಿಷಯಗಳ ಬಗ್ಗೆ ಸೇವೆ ವಿಸ್ತಾರಗೊಂಡಿದೆ.ಖುಷ್ಠ ರೋಗಿಗಳ ಚಿಕಿತ್ಸೆ ಜೊತೆಗೆ, ಅವರ ಜೀವನಾಧಾರಕ್ಕೂ ಸರಕಾರ ಅನುದಾನ ನೀಡಬೇಕಾಗಿದೆ ಎಂದರು.

ಜಿಲ್ಲಾ ಸರ್ಜನ್ ಡಾ.ಆಸ್ಗರ್ ಬೇಗ್ ಮಾತನಾಡಿ,ಸದಾ ತ್ರಿಪೀಸ್ ಸೂಟ್‌ನಲ್ಲಿ ಇರುತ್ತಿದ್ದ ಗಾಂಧಿ, ಭಾರತದ ಬಡಜನರ ದುಸ್ಥಿತಿ ಕಂಡು ತುಂಡು ಬಟ್ಟೆಗೆ ಬದಲಾಗಿ, ಎಲ್ಲರನ್ನು ಒಳಗೊಂಡ ಹೋರಾಟ ರೂಪಿಸಿ, ದೇಶಕ್ಕೆ ಸ್ವಾತಂತ್ರ ತಂದುಕೊಟ್ಟರು.ಒಂದು ಕಾಲದಲ್ಲಿ ದೇಶದಲ್ಲಿ 50 ಲಕ್ಷ ದಷ್ಟಿದ್ದ ಕುಷ್ಠ ರೋಗಿಗಳ ಸಂಖ್ಯೆ, ವ್ಯಾಪಕ ಪ್ರಚಾರ ಮತ್ತು ರೋಗಿಗಳಲ್ಲಿ ಅರಿವು ಮೂಡಿಸಿದ ಪರಿಣಾಮ, ಮತ್ತು ಜನರದಲ್ಲಿದ್ದ ತಪ್ಪು ಭಾವನೆ ಹೋಗಲಾಡಿಸಿ,ಇಂದು 2 ಲಕ್ಷಕ್ಕೆ ಇಳಿದಿದೆ. ತುಮಕೂರು ಜಿಲ್ಲೆಯಲ್ಲಿ ಕೇವಲ 49 ಜನ ಮಾತ್ರ ಕುಷ್ಠ ರೋಗಿಗಳಿದ್ದಾರೆ. ಇದೆಲ್ಲದರ ಹಿಂದೆ ಸರಕಾರ,ಸಂಘ ಸಂಸ್ಥೆಗಳು ಹಾಗೂ ಜಪಾನಂದ ಜೀ ಅವರಂತಹ ಸೇವಾ ನಿರತ ಸ್ವಾಮೀಜಿಗಳ ಅವಿರತ ಪರಿಶ್ರಮವಿದೆ. ಹಾಗಾಗಿ ಜನರು ಕುಷ್ಠ ರೋಗದ ಬಗ್ಗೆ ನಿರ್ಲಕ್ಷ ಮಾಡದೆ ಆರಂಭ ದಲ್ಲಿಯೇ ಚಿಕಿತ್ಸೆ ಪಡೆಯುವುದರಿಂದ ಗುಣಮುಖರಾಗಿ ಇತರರಂತೆ ಸಾಮಾನ್ಯ ಜೀವನ ನಡೆಸಬಹುದು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪಾವಗಡದ ಶ್ರೀರಾಮಕೃಷ್ಣ ಆಶ್ರಮದ ಮುಖ್ಯಸ್ಥರಾದ ಶ್ರೀಜಪಾನಂದ ಜೀ ಮಾತನಾಡಿ, ಇಂದು ಮಹಾತ್ಮಗಾಂಧಿ ನಮ್ಮೊಂದಿಗೆ ಇಲ್ಲ.ಕಳೆದ 35 ವರ್ಷಗಳಿಂದ ಗಾಂಧೀ ಸಂಸ್ಮರಣೆ ಮತ್ತು ಸರ್ವೋದಯ ದಿನವನ್ನು ಶ್ರೀರಾಮಕೃಷ್ಣ ಆಶ್ರಮದ ವತಿಯಿಂದ ಆಯೋಜಿಸಿಕೊಂಡು ಬರಲಾಗುತ್ತಿದೆ.ಆರು ವರ್ಷಗಳಿಗೂ ಹೆಚ್ಚು ದಿನ ಜೈಲಿನಲ್ಲಿ ಕಳೆದರು.ಗಾಂಧೀಜಿ ಸಹ ಕುಷ್ಠ ರೋಗಿಗಳ ಸೇವೆಯಲ್ಲಿ ತೊಡಗಿದ್ದರು. ಇಂದು ನಮ್ಮೊಂದಿಗೆ ಮೊಬಲಿಟಿ ಇಂಡಿಯಾ ಹಾಗೂ ತುಮಕೂರು ವಿವಿ ಸ್ನಾತಕೋತ್ತರ ಸಮಾಜ ಕಾರ್ಯದ ಡಾ.ಕೆ.ಜಿ.ಪರುಶುರಾಮ್ ತಂಡ ಇದೆ. ಯಾರು ಆಧೀರರಾಗಬೇಡಿ ಎಂದರು.

ಕುಷ್ಠ ರೋಗ ಎಂದರೆ ಮೂಗುಮುರಿಯುವವರೇ ಹೆಚ್ಚು.ಆದರೆ ಇತ್ತೀಚಿನ ದಿನಗಳಲ್ಲಿ ಬದಲಾಗಿದೆ. ಜನರಲ್ಲಿ ಜಾಗೃತಿ ಮೂಡುತ್ತಿದೆ.ಸರಕಾರ ಮತ್ತು ಇಲಾಖೆ ಕುಷ್ಠ ರೋಗಿಗಳಿಗೆ ಜೀವನಕ್ಕೆ ಅಗತ್ಯವಿರುವ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಿದೆ.ಸರಕಾರದ ಜೊತೆಗೆ, ನಾವುಗಳು ಸಹ ಕೈಜೋಡಿಸಬೇಕಿದೆ ಎಂದು ಶ್ರೀಜಪಾನಂದ ಜೀ ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಚಂದ್ರಶೇಖರ್,ಜಿಲ್ಲಾ ಕುಷ್ಠ ರೋಗ ನಿಯಂತ್ರಣಾಧಿಕಾರಿ ಡಾ.ರವೀಂದ್ರನಾಯ್ಕ. ಕೆ, ಜಿಲ್ಲಾ ಕ್ಷಯ ರೋಗ ನಿಯಂತ್ರಣಾಧಿಕಾರಿ ಡಾ.ಮೋಹನ್‌ದಾಸ್, ಪಾವಗಡದ ಶ್ರೀ ಶಾರದಾದೇವಿ ಕಣ್ಣಿನ ಆಸ್ಪತ್ರೆಯ ತಜ್ಞ ವೈದ್ಯರು, ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

## ಗೊಂದಲದ ಗೂಡಾದ ಕೋರಾ ವಿಶೇಷ ಗ್ರಾಮ ಸಭೆ: ಸೂರು ಕಟ್ಟುವ ಬಡವರ ಕನಸ್ಸಿಗೆ ಬಗ್ನ




ತುಮಕೂರು: ಸರ್ಕಾರ ಕಾಲ ಕಾಲಕ್ಕೆ ಜನರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ನಿರ್ಗತಿಕರು ನಿರಾಶ್ರಿತರಿಗೆ ವಿವಿಧ ಯೋಜನೆಗಳ ಅಡಿ ನಿವೇಶನ ಹಂಚಿಕೆ ಮಾಡುತ್ತಿದ್ದು ಈ ಹಿನ್ನೆಲೆಯಲ್ಲಿ ತುಮಕೂರ್ ತಾಲೂಕು ಕೋರ ಹೋಬಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ನಿವೇಶನ ರಹಿತರಿಗೆ ಮುಖ್ಯಮಂತ್ರಿಗಳ ಗ್ರಾಮೀಣ ಆಶ್ರಯ ನಿವೇಶನ ಯೋಜನೆ ಅಡಿ ಅರ್ಹ ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡಲು ಹೊರ ಗ್ರಾಮ ಪಂಚಾಯಿತಿ ಕಚೇರಿ ಬಳಿ ಕರೆಯಲಾಗಿದ್ದ ವಿಶೇಷ ಗ್ರಾಮ ಸಭೆಯು ಗದ್ದಲ ಗಲಾಟೆ ಕೋಲಾಹಲಕ್ಕೆ ಕಾರಣವಾಗಿ ನೋಡಲ್ ಅಧಿಕಾರಿಗಳಿಂದ ಮುಂದೂಡಲ್ಪಟ್ಟ ಘಟನೆ ನಡೆಯಿತು.

ಕೊರಾ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಮುದ್ದೇನಹಳ್ಳಿ ಗ್ರಾಮದ ಸರ್ವೆ ನಂಬರ್ 24ರಲ್ಲಿ ನಾಲ್ಕು ಎಕರೆ ನಿವೇಶನ ಹಂಚಿಕೆಗಾಗಿ ಮೀಸಲಿಟ್ಟಿದ್ದು ಈ ಸಂಬಂಧ ಗ್ರಾಮ ಪಂಚಾಯಿತಿ ಕಚೇರಿ ಆವರಣದಲ್ಲಿ ಗ್ರಾ.ಪಂ. ಅಧ್ಯಕ್ಷರು, ಮಾರ್ಗದರ್ಶಿ ಅಧಿಕಾರಿ ಮತ್ತು ಎಸ್.ಕೃಷ್ಣಪ್ಪ ಜಂಟಿ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಇವರ ಮಾರ್ಗದರ್ಶನದಲ್ಲಿ ಕರೆಯಲಾಗಿದ್ದ ವಿಶೇಷ ಗ್ರಾಮ ಸಭೆಯಲ್ಲಿ ಗ್ರಾಮ ಪಂಚಾಯಿತಿ ಸದಸ್ಯರು ಈ ಹಿಂದೆ ಕೈಗೊಳ್ಳಲಾಗಿದ್ದ ನಡಾವಳಿ ನಿಯಮಗಳ ಪ್ರಕಾರ ನಿವೇಶನ ಹಂಚಿಕೆ ಮಾಡಬಾರದೆಂದು ಸಭೆಯಲ್ಲಿ ನೋಡಲ್ ನಡಾವಳಿ ಓದಬೇಕು ಎಂದು ತಾಕೀತು ಮಾಡಿದ್ದರು ಇದಕ್ಕೆ ಪ್ರತಿಕ್ರಿಯೆಯಾಗಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಕೃಷ್ಣಮೂರ್ತಿಯವರು ಜಿಲ್ಲಾಧಿಕಾರಿಗಳ ಆದೇಶದನ್ವಯ ವಿಶೇಷ ಗ್ರಾಮ ಸಭೆಯನ್ನು ಆಯೋಜನೆ ಮಾಡಲಾಗಿದೆ ಸರ್ಕಾರದ ಉದ್ದೇಶದೊಂದಿಗೆ ನಿರ್ಗತಿಕ ಬಡವರಿಗೆ ನಿವೇಶನ ಹಂಚಿಕೆ ಮಾಡಲು ಸಹಮತ ಬೇಕಿರುವುದರಿಂದ ಪಂಚಾಯತಿ ಎಲ್ಲ ಸದಸ್ಯರಿಗೂ ವಿಶೇಷ ಗ್ರಾಮ ಸಭೆಯ ಸೂಚನಾ ಪತ್ರವನ್ನು ಹೊರಡಿಸಲಾಗಿದೆ ಎಂದಾಗ ಇದಕ್ಕೆ ಏರು ಧ್ವನಿಯಲ್ಲಿ ಪ್ರತಿಕ್ರಿಸಿದ ಗ್ರಾಮ ಪಂಚಾಯಿತಿಯ ಸದಸ್ಯರುಗಳು ಜಿಲ್ಲಾಧಿಕಾರಿಗಳ ಆದೇಶಕ್ಕೆ ಇಲ್ಲಿ ಯಾವುದೇ ಕಿಮ್ಮತ್ತಿಲ್ಲ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯಿತಿಗೆ ವಿಶೇಷ ಅಧಿಕಾರವಿದ್ದು ಸದಸ್ಯರುಗಳ ಸಭಾ ನಡಾವಳಿಯಂತೆ ನಿವೇಶನ ಹಂಚಿಕೆಯನ್ನು ಕೈ ಬಿಟ್ಟು ಶಾಲೆ ಅಂಗನವಾಡಿ ಸಮುದಾಯ ಭವನಗಳನ್ನು ಸ್ಥಾಪಿಸಲು ಈ ಜಾಗವನ್ನು ಬಳಸಿಕೊಳ್ಳಬೇಕು ಎಂದು ಏರು ಧ್ವನಿಯಲ್ಲಿ ಕೂಗಿ ಹೇಳಿದರು.ಕೆಲಸ ಸದಸ್ಯರು ಈಗಾಗಲೇ ನಿವೇಶನ ರಹಿತರು ನಿವೇಶನಕ್ಕಾಗಿ ಅರ್ಜಿ ದಾಖಲೆಗಳನ್ನು ಸಲ್ಲಿಸಿದ್ದು ಅದರಂತೆ ಅವರಿಗೆ ಜಿಲ್ಲಾಧಿಕಾರಿಗಳ ಆದೇಶದಂತೆ ನಿವೇಶನ ಹಂಚಿಕೆ ಮಾಡಬೇಕು ಎಂದು ಕೂಗಾಡಿದರು ಗ್ರಾಮ ಪಂಚಾಯತಿ ಸದಸ್ಯರುಗಳ ಏರು ಧ್ವನಿಯ ಕೂಗಾಟದಿಂದ. ಸಭೆ ಕೆಲಸ ಗೊಂದಲದ ಗೂಡಾಯಿತು. ಕೆಲ ಸದಸ್ಯರು ಪಿಡಿಓ ಅವರು ಕ್ರಮಬದ್ಧವಾದ ವಿಶೇಷ ಗ್ರಾಮ ಸಭೆಯನ್ನು ಆಯೋಜನೆ ಮಾಡಿಲ್ಲ ಎಂದು ಆರೋಪ ಮಾಡಿದ್ರು, ಗ್ರಾಮ ಸಭೆಯ ನಡವಳಿಯ ಮುಂದೆ ಜಿಲ್ಲಾಧಿಕಾರಿಗಳ ಆದೇಶಕ್ಕೆ ಯಾವುದೇ ಬೆಲೆ ಇಲ್ಲ ಹೀಗಾಗಿ ವಿಶೇಷ ಗ್ರಾಮ ಸಭೆ ಅರ್ಥ ಇಲ್ಲದ್ದು ಎಂದು ಸದಸ್ಯರುಗಳು ಈ ವೇಳೆ ಕೂಗಾಟ ಮಾಡಿದ್ರು.

### ಅಧಿಕಾರಿಯ ಮುಂದೆ ಸದಸ್ಯರ ವಾಗ್ವಾದ




ಗೊಂದಲದ ಸಭೆಯ ಎಲ್ಲಾ ಆಯಾಮಗಳನ್ನು ಅರಿತ ನೋಡಲ್ ಅಧಿಕಾರಿ ಎಸ್ ಕೃಷ್ಣಪ್ಪ ಅವರು ಗ್ರಾ.ಪಂ. ನಡಾವಳಿಗೆ ಅದರದೇ ಆದ ಗೌರವವಿದೆ ಜಿಲ್ಲಾಧಿಕಾರಿಗಳ ಆದೇಶಕ್ಕೆ ನಾವು ಬೆಲೆ ಕೊಡಬೇಕಿದೆ ಸಭೆಯಲ್ಲಿ ಒಮ್ಮತ ಮೂಡದೆ ಹೋದರೆ ನಿರ್ಣಯಗೊಳಿಸಲು ಸಾಧ್ಯವಾಗುವುದಿಲ್ಲ ಬಡವರ ಬಗ್ಗೆ ಕಾಳಜಿ ಇರುವ ಸರ್ಕಾರಗಳು ಮಾಡಿರುವ ಉದ್ದೇಶಗಳನ್ನ ಅರಿತು ಗ್ರಾ.ಪಂ ಸದಸ್ಯರು ಅವಕಾಶಗಳನ್ನು ಸದ್ಬಳಕೆ ಮಾಡಿ ಕೊಳ್ಳಬೇಕು ಸಭೆಯಲ್ಲಿ ಒಮ್ಮತ ನೋಡದ ಕಾರಣ ಇದರ ಬಗ್ಗೆ ವಿಸ್ತೃತವಾದ ವರದಿಯನ್ನು ಜಿಲ್ಲಾಧಿಕಾರಿಗಳು ಹಾಗೂ ಕ್ಷೇತ್ರದ ಶಾಸಕರು, ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಗೃಹ ಸಚಿವರಾದ ಡಾ. ಜಿ ಪರಮೇಶ್ವರ್ ಅವರುಗಳ ಗಮನಕ್ಕೆ ತಂದು ಅವರುಗಳ ನಿರ್ದೇಶನ ಮಾರ್ಗದರ್ಶನದಂತೆ ಮುಂದಿನ ಸಭೆಯ ರೂಪರೇಷೆ ಮತ್ತು ನಿರ್ಧಾರಗಳನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಎಸ್ ಕೃಷ್ಣಪ್ಪ, ನೋಡಲ್ ಅಧಿಕಾರಿ
ಜಂಟಿ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ

> ಕ' ಳ' ದ'
> ಇಪ್ಪತ್ತು ವರ್ಷಗಳಿಂದ ತುಮಕೂರು ಜಿಲ್ಲೆಯ ಕೋರಾ ಗ್ರಾ.ಪಂ ವ್ಯಾಪ್ತಿಯಲ್ಲಿ ವಾಸಮಾಡುತ್ತಿದ್ದೇವೆ ಪ್ರತಿ ಗ್ರಾಮ ಸಭೆಯಲ್ಲಿ ನಿವೇಶನ ನೀಡುತ್ತೇವೆಂದು ಅರ್ಜಿ ಪಡೆದು ಸತಾಯಿಸುತ್ತಿದ್ದಾರೆ ನಮ್ಮ ಕುಟುಂಬ ಬೀದಿಯಲ್ಲೆ ಕಾಲ ಕಳೆಯುವಂತಾಗಿದೆ ಗ್ರಾ.ಪಂ.ಸದಸ್ಯರ ಒಮ್ಮತವಿಲ್ಲದ ಕಾರಣ ನಮ್ಮ ಕನಸ್ಸಿನ ಸೂರಿಗೆ ಬೆಂಕಿ ಬಿದ್ದಂತಾಗಿದೆ._ ರವಿ ಕುಮಾರ್
> ಕೋರಾ ಗ್ರಾಮ ವಾಸಿ



# ಬೆಳ್ಳುಳ್ಳಿ ಕಬಾಬ್ ಅಲ್ಲ ಬೆಳ್ಳುಳ್ಳಿ ಪಾಲಕ್ ರೈಸ್ ಈಗ ರುಚಿಕರವಾಗಿ ಮನೆಯಲ್ಲೇ ಮಾಡಬಹುದು

ಚಳಿಗಾಲದ ಸಮಯ ಎಂದರೆ ಅದು ತಾಜಾ ತರಕಾರಿ (ಹಾಗೂ ಸೊಪ್ಪುಗಳ ಸೀಸನ್ ಆಗಿರುತ್ತದೆ. ಶೀತದ ಸಮಯದಲ್ಲಿ ತಾಜಾ ತರಕಾರಿ, ಸೊಪ್ಪುಗಳನ್ನು ಸೇವಿಸುವುದು ಆರೋಗ್ಯಕ್ಕೂ ಉತ್ತಮವಾಗಿದೆ. ಸೊಪ್ಪುಗಳು ಖನಿಜಾಂಶಗಳು, ಪೋಷಕಾಂಶಗಳ ಆಗರ ಎಂದೆನಿಸಿದೆ. ಬರೇ ಸೊಪ್ಪುಗಳಿಂದ ಪಲ್ಯ, ಸಾಗು, ಸಾಂಬಾರ್ ಮಾಡಿಕೊಳ್ಳೋರು ಬಗೆ ಬಗೆಯ ಅನ್ನದ ರೆಸಿಪಿಗಳನ್ನು ಟ್ರೈ ಮಾಡಿಕೊಳ್ಳಬಹುದು. ಬೆಳಗ್ಗಿನ ಬ್ರೇಕ್‌ಫಾಸ್ಟ್‌ಗಾಗಿರಬಹುದು, ಮಧ್ಯಾಹ್ನ ಇಲ್ಲವೇ ರಾತ್ರಿಯೂಟಕ್ಕೂ ಸೊಪ್ಪಿನ ಅನ್ನ ಉತ್ತಮವಾಗಿರುತ್ತದೆ. ಇಂದಿನ ಲೇಖನದಲ್ಲಿ ಈಸಿಯಾಗಿ ಪೌಷ್ಟಿಕಾಂಶಭರಿತವಾದ ಪಾಲಕ್ ಅನ್ನ ಮಾಡಿಕೊಳ್ಳುವುದು ಹೇಗೆ ಎಂಬುದನ್ನು ತಿಳಿಯೋಣ.

ಸಮಯ ಎಂದರೆ ಅದು ತಾಜಾ ತರಕಾರಿ ಹಾಗೂ ಸೊಪ್ಪುಗಳ ಸೀಸನ್ ಆಗಿರುತ್ತದೆ. ಶೀತದ ಸಮಯದಲ್ಲಿ ತಾಜಾ ತರಕಾರಿ, ಸೊಪ್ಪುಗಳನ್ನು ಸೇವಿಸುವುದು ಆರೋಗ್ಯಕ್ಕೂ ಉತ್ತಮವಾಗಿದೆ. ಸೊಪ್ಪುಗಳು ಖನಿಜಾಂಶಗಳು, ಪೋಷಕಾಂಶಗಳ ಆಗರ ಎಂದೆನಿಸಿದೆ. ಬರೇ ಸೊಪ್ಪುಗಳಿಂದ ಪಲ್ಯ, ಸಾಗು, ಸಾಂಬಾರ್ ಮಾಡಿಕೊಳ್ಳೋರು ಬಗೆ ಬಗೆಯ ಅನ್ನದ ರೆಸಿಪಿಗಳನ್ನು ಟ್ರೈ ಮಾಡಿಕೊಳ್ಳಬಹುದು. ಬೆಳಗ್ಗಿನ ಬ್ರೇಕ್‌ಫಾಸ್ಟ್‌ಗಾಗಿರಬಹುದು, ಮಧ್ಯಾಹ್ನ ಇಲ್ಲವೇ ರಾತ್ರಿಯೂಟಕ್ಕೂ ಸೊಪ್ಪಿನ ಅನ್ನ ಉತ್ತಮವಾಗಿರುತ್ತದೆ. ಇಂದಿನ ಲೇಖನದಲ್ಲಿ ಈಸಿಯಾಗಿ ಪೌಷ್ಟಿಕಾಂಶಭರಿತವಾದ ಪಾಲಕ್ ಅನ್ನ ಮಾಡಿಕೊಳ್ಳುವುದು ಹೇಗೆ ಎಂಬುದನ್ನು ತಿಳಿಯೋಣ.

ಪಾಲಕ್ ರೈಸ್ ಇಲ್ಲವೇ ಅನ್ನ ಮಾಡಿಕೊಳ್ಳುವ ಮೊದಲು ಸೊಪ್ಪನ್ನು ಕುದಿಯುವ ನೀರಿನಲ್ಲಿ ಹಾಕಿ 10 ನಿಮಿಷ ಹಾಗೆಯೇ ಬಿಡಿ

ಬಳಿಕ ಸೊಪ್ಪನ್ನು ಒಂದು ಬೌಲ್‌ನಷ್ಟು ಐಸ್ ವಾಟರ್‌ಗೆ ಹಾಕಿ. 10 ನಿಮಿಷ ಹಾಗೆಯೇ ಇರಲಿ, ಬ್ಲೆಂಡರ್‌ಗೆ ಹಾಕಿ ಸೊಪ್ಪನ್ನು ನುಣ್ಣನೆ ಪೇಸ್ಟ್ ಮಾಡಿ. ಇನ್‌ಸ್ಟಂಟ್ ಪಾಟ್‌ನಲ್ಲಿ ಪಾಲಕ್ ರೈಸ್ ಮಾಡಿಕೊಳ್ಳುವುದರಿಂದ ಪಾಟ್ ಅನ್ನು ಆನ್ ಮಾಡಿಟ್ಟುಕೊಳ್ಳಿ





ಇದಕ್ಕೆ ಎಣ್ಣೆ ಇಲ್ಲವೇ ತುಪ್ಪ ಹಾಕಿ ಬಳಿಕ ಜೀರಿಗೆ, ಬೇ ಲೀಫ್ ಹಾಕಿ ಹುರಿಯಿರಿ. ದಾಲ್ಚಿನ್ನಿ ತುಂಡು ಹಾಗೂ ಲವಂಗ ಹಾಕಿ

ಸೀಳಿದ ಹಸಿಮೆಣಸು ಹಾಕಿ ಬಳಿಕ ಕತ್ತರಿಸಿದ ಈರುಳ್ಳಿ, ಶುಂಠಿ ಹಾಗೂ ಬೆಳ್ಳುಳ್ಳಿ ಪೇಸ್ಟ್ ಹಾಕಿ ಹುರಿದುಕೊಳ್ಳಿ.

ಈಗ ಟೊಮೇಟೊ ಹಾಗೂ ಬಟಾಣಿ ಸೇರಿಸಿ, ಉಪ್ಪಿನೊಂದಿಗೆ ಪಾಲಕ್ ಪ್ಯೂರಿ ಹಾಕಿಕೊಳ್ಳಿ. ಅಕ್ಕಿಯಿಂದ ನೀರೆಲ್ಲಾ ಬಸಿದುಕೊಂಡು ಪಾಟ್‌ಗೆ ಹಾಕಿ.

ನೀರು ಹಾಕಿ ಎಲ್ಲವನ್ನೂ ಚೆನ್ನಾಗಿ ಮಿಶ್ರ ಮಾಡಿ. ಮುಚ್ಚಳ ಮುಚ್ಚಿ ಕುಕ್ಕರ್ ಅನ್ನು ಮ್ಯಾನ್ಯುವಲ್/ಪ್ರೆಶರ್ ಮೋಡ್‌ನಲ್ಲಿ 4 ನಿಮಿಷ ಬೇಯಿಸಿ. 4 ನಿಮಿಷದ ತರುವಾಯ ಪ್ರೆಶರ್ ತನ್ನಷ್ಟಕ್ಕೆ ರಿಲೀಸ್ ಆಗಲಿ. ಸೌಟಿನಿಂದ ಅನ್ನವನ್ನು ಮಸಾಲೆಯೊಂದಿಗೆ ಮಿಶ್ರ ಮಾಡಿ. ಲಿಂಬೆ ರಸ ಹಾಗೂ ತಾಜಾ ಕೊತ್ತಂಬರಿ ಸೊಪ್ಪು ಹಾಕಿ ಅಲಂಕರಿಸಿ.

### ರೈಸ್ ಕುಕ್ಕರ್‌ನಲ್ಲಿ ಪಾಲಕ್ ರೈಸ್ ಮಾಡ್ಕೊಳ್ಳೋದು ಹೇಗೆ

ರೈಸ್ ಕುಕ್ಕರ್‌ನಲ್ಲಿ ಅನ್ನ ಬೇಯಿಸಿ, ಇದಕ್ಕೆ ಬೇ ಲೀಫ್, ದಾಲ್ಚಿನ್ನಿ ತುಂಡು ಹಾಗೂ ಲವಂಗ ಸೇರಿಸಿ ಇದರಿಂದ ಅನ್ನದೊಂದಿಗೆ ಮಸಾಲೆ ಕೂಡ ಬೇಯುತ್ತದೆ. ಪಾಲಕ್ ಅನ್ನು ಬೇಯಿಸಿ ಪ್ಯೂರಿ ರೆಡಿ ಮಾಡಿ ಪ್ಯಾನ್‌ನಲ್ಲಿ ಎಣ್ಣೆ ಬಿಸಿ ಮಾಡಿ, ಎಣ್ಣೆ ಬಿಸಿಯಾದೊಡನೆ ಜೀರಿಗೆ ಹಾಕಿ ಈಗ ತುಂಡು ಮಾಡಿದ ಹಸಿ ಮೆಣಸು ಸೇರಿಸಿ ಇದಕ್ಕೆ ಈರುಳ್ಳಿ, ಶುಂಠಿ, ಬೆಳ್ಳುಳ್ಳಿ ಪೇಸ್ಟ್ ತಯಾರಿಸಿ. ಈರುಳ್ಳಿ ಚಿನ್ನದ ಬಣ್ಣಕ್ಕೆ ಬರುವವರೆಗೆ ಹುರಿದುಕೊಳ್ಳಿ.

ಈಗ ಟೊಮೇಟೊ, ಹಸಿ ಬಟಾಣಿ ಹಾಕಿ. ಟೊಮೇಟೊ ಮೆತ್ತಗಾಗುವರೆಗೆ ಸಾಟೆ ಮಾಡಿ. ಉಪ್ಪು ಬೆರೆಸಿ ಪಾಲಕ್ ಪ್ಯೂರಿ ಸೇರಿಸಿ ಕೆಲವು ನಿಮಿಷ ಫ್ರೈ ಮಾಡಿ.

ಬೇಯಿಸಿದ ಅನ್ನು ಹಾಕಿ ಎಲ್ಲವನ್ನೂ ಮಿಶ್ರ ಮಾಡಿ. ಅನ್ನದಲ್ಲಿರುವ ಬೇ ಲೀಫ್, ದಾಲ್ಚಿನ್ನಿ, ಲವಂಗ ಬೇಕಾದರೆ ತೆಗೆದು ಹಾಕಬಹುದು. ಕೊನೆಗೆ ಲಿಂಬೆ ರಸ ಹಾಕಿ ತಾಜಾ ಕೊತ್ತಂಬರಿ ಸೊಪ್ಪಿನಿಂದ ಅಲಂಕರಿಸಿ.

### ಪಾಲಕ್ ರೈಸ್‌ಗಾಗಿ ಒಂದಿಷ್ಟು ಟಿಪ್ಸ್

ಈ ರೆಸಿಪಿಗಾಗಿ ಫ್ರೋಜನ್ ಪಾಲಕ್ ಅನ್ನು ಬಳಸಬಹುದು. ಹೀಗಿದ್ದರೆ ನೇರವಾಗಿ ಅದರ ಪ್ಯೂರಿ ತೆಗೆಯಬಹುದು.

ಪಾಲಕ್ ಅನ್ನು ಸಣ್ಣಗೆ ಹೆಚ್ಚಿ ಹಾಗೂ ಇತರ ತರಕಾರಿಗಳೊಂದಿಗೆ ಮಿಶ್ರ ಮಾಡಿಕೊಳ್ಳಬಹುದು. ನೀರಿನ ಬದಲು ತೆಂಗಿನ ಹಾಲನ್ನು ಕೂಡ ಈ ರೈಸ್ ರೆಸಿಪಿಗೆ ಬಳಸಿಕೊಳ್ಳಬಹುದು. ನೀರು ಹಾಗೂ ತೆಂಗಿನ ಹಾಲನ್ನು ಸಮ ಸಮ ಪ್ರಮಾಣದಲ್ಲಿ ಬಳಸಿ ವಿಭಿನ್ನ ರುಚಿ ಬೇಕಾದರೆ 1–2 ಚಮಚ ಸಾಂಬಾರ್ ಪೌಡರ್ ಅನ್ನು ಇತರ ಮಸಾಲೆಯೊಂದಿಗೆ ಸೇರಿಸಿ.

ಉಳಿದ ಅನ್ನದೊಂದಿಗೆ ಕೂಡ ಪಾಲಕ್ ರೈಸ್ ಅನ್ನು ಟ್ರೈ ಮಾಡಬಹುದು. ಇನ್‌ಸ್ಟಂಟ್ ಪಾಟ್ ಬದಲಿಗೆ ಪ್ರೆಶರ್ ಕುಕ್ಕರ್‌ನಲ್ಲಿ ಕೂಡ ಇದೇ ವಿಧಾನ ಬಳಸಿ ಪಾಲಕ್ ರೈಸ್ ಮಾಡಿಕೊಳ್ಳಬಹುದು.

ಪ್ರೀತಿಯ ನೆಚ್ಚಿನ ಓದುಗ ಮಿತ್ರರೇ ಸೂರ್ಯಪ್ರಗತಿ ಕನ್ನಡ ದಿನಪತ್ರಿಕೆಯ ಸುದ್ದಿಗಳನ್ನ ಅಂತರ್ಜಾಲ ತಾಣ ವೆಬ್ ಆವೃತ್ತಿ https://suryapragathi.com ನಲ್ಲಿ ಹಾಗೂ https://epaper.suryapragathi.com ನಲ್ಲಿ ಓದಬಹುದು – ನೋಡಬಹುದು ಹೆಚ್ಚಿನ ಮಾಹಿತಿಗಾಗಿ 9901010109

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

## ಕ್ಯಾರೆಟ್ ಬಾತ್ ಬೇಕಾಗುವ ಪದಾರ್ಥಗಳು...



ಅನ್ನ– 1 ಬಟ್ಟಲು
ಕ್ಯಾರೆಟ್– 2
ಈರುಳ್ಳಿ– 1
ಹಸಿ ಮೆಣಸಿನಕಾಯಿ– 4
ಕರಿಬೇವು– ಸ್ವಲ್ಪ
ಕೊತ್ತಂಬರಿ ಸೊಪ್ಪು– ಸ್ವಲ್ಪ
ಲಿಂಬೆಹಣ್ಣಿನ ರಸ– ಸ್ವಲ್ಪ
ಶುಂಠಿ– ಸ್ವಲ್ಪ
ಎಣ್ಣೆ– ಸ್ವಲ್ಪ
ಉದ್ದಿನಬೇಳೆ– ಸ್ವಲ್ಪ
ಸಾಸಿವೆ–ಸ್ವಲ್ಪ
ಕಡಲೆಬೀಜ– ಸ್ವಲ್ಪ
ಅರಿಶಿಣ– ಸ್ವಲ್ಪ
ಉಪ್ಪು– ರುಚಿಗೆ ತಕ್ಕಷ್ಟು

ಮಾಡುವ ವಿಧಾನ...

ಕ್ಯಾರೆಟ್ ನ ಸಿಪ್ಪೆ ತೆಗೆದುಕೊಂಡು ತುರಿದುಕೊಳ್ಳಬೇಕು. ನಂತರ ಒಂದು ಬಾಣಲೆಗೆ ಎಣ್ಣೆ, ಸಾಸಿವೆ, ಉದ್ದಿನ ಬೇಳೆ, ಕಡಲೆಬೀಜ, ಹಸಿ ಮೆಣಸಿನಕಾಯಿ, ಶುಂಠಿ, ಅರಿಶಿಣ, ಕರಿಬೇವು ಹಾಕಿ ಒಗ್ಗರಣೆ ಸಿದ್ಧ ಮಾಡಿಕೊಳ್ಳಬೇಕು. ನಂತರ ಸಣ್ಣಗೆ ಹೆಚ್ಚಿದ ಈರುಳ್ಳಿ ಹಾಗೂ ಕ್ಯಾರೆಟ್ ತುರಿಯನ್ನು ಹಾಕಿ ಕೆಂಪಗೆ ಹುರಿದುಕೊಳ್ಳಿ.

ಕ್ಯಾರೆಟ್ ಚೆನ್ನಾಗಿ ಹುರಿದ ನಂತರ ಅನ್ನ, ಉಪ್ಪು, ಲಿಂಬೆ ರಸ ಹಾಗೂ ಕೊತ್ತಂಬರಿ ಸೊಪ್ಪನ್ನು ಹಾಕಿ ಚೆನ್ನಾಗಿ ಕಲಸಬೇಕು. ಇದೀಗ ರುಚಿಕರವಾದ ಕ್ಯಾರೆಟ್ ಬಾತ್ ಸವಿಯಲು ಸಿದ್ಧ.

–ರೇಡಿಯೋ ಗೌತಮ್, ಡಿಸೈನ್ ಕುಕ್ಕರ

# ಪ್ರೀತಿಯ ಸೆಳೆತಕ್ಕೆ ರಾಜ್ಯಗಳೇ ಉರಳಿವೆ ಎಷ್ಟೋ ಅಧಿಕಾರ ತ್ಯಾಗವಾಗಿದೆ ಪ್ರೀತಿಯ ಆಳ.... ಹುಡುಕಾಟ.........

ತಾಯಿಯ ಕರುಳ ಬಳ್ಳಿಯ ಸಂಬಂಧ, ತಂದೆ ತಾಯಿ ಅಣ್ಣ ತಂಗಿ ಅಕ್ಕ ತಮ್ಮ ಅಜ್ಜ ಅಜ್ಜಿ ಮುಂತಾದ ದೀರ್ಘಕಾಲದ ರಕ್ತ ಸಂಬಂಧಗಳನ್ನು ಮೀರಿ ಕೇವಲ ಒಂದೋ ಎರಡೋ ವರ್ಷದ ಪ್ರೀತಿಗಾಗಿ, ರೈಲಿಗೆ ತಲೆ ಕೊಡಲು, ಕುತ್ತಿಗೆಗೆ ನೇಣು ಬಿಗಿದುಕೊಳ್ಳಲು, ವಿಷ ಕುಡಿಯಲು, ಬೆಂಕಿ ಹಚ್ಚಿಕೊಳ್ಳಲು, ಎತ್ತರದಿಂದ ಜಿಗಿಯಲು, ನೀರಿಗೆ ಹಾರಲು ಮನಸ್ಸನ್ನು ಪ್ರೀತಿ ಪ್ರೇರೇಪಿಸುತ್ತದೆ ಎಂದರೆ ಅದರ ತೀವ್ರತೆ ಎಷ್ಟಿರಬಹುದು. ಈ ಪ್ರೀತಿ ಕಾಲದ ಪರಿವೆಯೇ ಇಲ್ಲದೆ ಅನಾದಿ ಕಾಲದಿಂದ ಈ ಕ್ಷಣದವರೆಗೂ ಅದೇ ಉತ್ಕಟತೆಯನ್ನು ಉಳಿಸಿಕೊಂಡಿದೆ.

ಪ್ರೀತಿಗಾಗಿ ಎಷ್ಟೋ ರಾಜ್ಯಗಳೂ ಉರುಳಿವೆ, ಹಾಗೆ ಪ್ರೀತಿಗಾಗಿ ಎಷ್ಟೋ ಅಧಿಕಾರ ತ್ಯಾಗಗಳೂ ಆಗಿವೆ.

ಒಮ್ಮೆ ಪ್ರೇಮಿಗಳಲ್ಲಿ ಪ್ರೀತಿಯ ಭಾವ ಮೊಳಕೆ ಒಡೆದು ಹೆಮ್ಮರವಾದರೆ ಮುಗಿಯಿತು. ಯಾವ ಅಡ್ಡಿ ಆತಂಕಗಳೂ ಅವರನ್ನು ಬೇರ್ಪಡಿಸುವುದು ಸಾಧ್ಯವಿಲ್ಲ. ಅದಕ್ಕೆ ಅಡ್ಡಿಯಾದವರನ್ನು ಕೊಲ್ಲುತ್ತಾರೆ ಅಥವಾ ಸ್ವತಃ ತಾವೇ ಸಾವಿಗೆ ಶರಣಾಗುತ್ತಾರೆ.

ಪ್ರೀತಿಗೆ ಜಾತಿ ವಯಸ್ಸು ಲಿಂಗ ಭಾಷೆ ಪ್ರದೇಶಗಳ ಹಂಗು ಇರುವುದಿಲ್ಲ. ಅಷ್ಟೇ ಏಕೆ ನೈತಿಕತೆಯ ಮೂಗುದಾರವೂ ಇರುವುದಿಲ್ಲ.

( ಕಾಮ ಪ್ರೀತಿಯ ಒಂದು ಭಾಗವೇ ಹೊರತು ಕಾಮವೇ ಪ್ರಧಾನವಾದಾಗ ಅದನ್ನು ಪ್ರೀತಿ ಎಂದು ಪರಿಗಣಿಸಲು ಸಾಧ್ಯವಿಲ್ಲ. )

ನಾನು ಹೇಳುತ್ತಿರುವುದು ನಿಜ ಪ್ರೀತಿಯ ಬಗ್ಗೆ ಮಾತ್ರ. ಪ್ರೀತಿಯ ಇನ್ನೊಂದು ಅತಿರೇಕವೆಂದರೆ, ಪ್ರೀತಿಗೆ ಯಾವುದೇ ಕಾರಣದಿಂದ ಧಕ್ಕೆಯಾದರೆ ಅದರ ರೂಪ ವೈರಾಗ್ಯ ಅಥವಾ ದ್ವೇಷದ ರೂಪ ತಾಳುತ್ತದೆ. ಅದರಲ್ಲೂ ಹದಿಹರೆಯದಲ್ಲಿ ಅದು ತೀವ್ರ ದ್ವೇಷಕ್ಕೆ ತಿರುಗುತ್ತದೆ. ನನಗೆ ಸಿಕ್ಕದ ಆ ಪ್ರೇಮಿ ಯಾರಿಗೂ ಸಿಗಬಾರದು ಎಂಬ ಭಾವನೆ ಬಲವಾಗಿ ಅದು ಬರ್ಬರ ಕೊಲೆ ಮಾಡಿಸುತ್ತದೆ. ಹೆಣ್ಣು ಗಂಡು ಇಬ್ಬರಲ್ಲೂ ಈ ದ್ವೇಷ ಸಮ ಪ್ರಮಾಣದಲ್ಲಿ ಇದ್ದರೂ ನಮ್ಮ ಸಾಮಾಜಿಕ ವ್ಯವಸ್ಥೆಯ ಕಾರಣಕ್ಕಾಗಿ ಯುವಕರೇ ಅತಿಹೆಚ್ಚು ನೇರ ಕೊಲೆಯಂತ ಕ್ರಮಕ್ಕೆ ಮುಂದಾಗುತ್ತಾರೆ.

ಪ್ರೀತಿ ಬದುಕಿಗೆ ಅಮೃತದಷ್ಟೇ ಮಹತ್ವ ಹೊಂದಿದೆ. ಹಾಗೆಯೇ ಅದು ಬಹಳಷ್ಟು ಸಲ ಅಫೀಮಿನ ಅಮಲಿನಂತೆ ನಮ್ಮಿಂದ ತಪ್ಪು ಮಾಡಿಸುತ್ತದೆ.

ಪ್ರೀತಿಯ ಮಡಿಲಿನಲ್ಲಿ ಭೂಮಿಯೇ ಸ್ವರ್ಗ, ವಿರಹದ ತಾಪದಲ್ಲಿ ಈ ನಿಂತ ನೆಲವೇ ನರಕ.

ಯಾವ ತತ್ವಜ್ಞಾನವೂ, ಯಾವ ವೇದಾಂತವೂ, ಯಾವ ಹಿತನುಡಿಗಳೂ ಪ್ರೀತಿಗೆ ಸರಿಸಾಟಿಯಲ್ಲ.

ನಮ್ಮ ದೇಹಕ್ಕಿಂತ ಪ್ರೀತಿಸಿದವರ ದೇಹ ಮನಸ್ಸುಗಳು ಮೇಲೆಯೇ ಹೆಚ್ಚಿನ ಅಭಿಮಾನ, ಮೋಹ, ನನ್ನದೆಂಬ ಸ್ವಾರ್ಥ ಮತ್ತು ನಿಯಂತ್ರಣ ಹೊಂದಲು ಪ್ರೀತಿ ತಹತಹಿಸುತ್ತದೆ. ಅದರ ಪರಿಣಾಮವೇ ಹಿಂಸೆ.

ಪ್ರೀತಿಯ ಆಳಕ್ಕೆ ಇಳಿದವರಿಗೆ ಮಾತ್ರ ಇದು ಅನ್ವಯಿಸುತ್ತದೆ. ಪ್ರೀತಿಯ ದಾರಿಯಲ್ಲಿ ಸ್ವಲ್ಪ ದೂರ ಸಾಗಿ ಅದರಿಂದ ವಿಮುಖರಾದವರಿಗೆ ಇದು ಅಷ್ಟಾಗಿ ಅರ್ಥವಾಗುವುದಿಲ್ಲ.

ತಾಯಿ – ಮಗುವಿನ, ಅಣ್ಣ – ತಂಗಿಯ, ಅಕ್ಕ – ತಮ್ಮನ, ಗಂಡ – ಹೆಂಡತಿಯ ಪ್ರೀತಿಯನ್ನು ಇದಕ್ಕೆ ಹೋಲಿಸಲಾಗುವುದಿಲ್ಲ. ಏಕೆಂದರೆ ಇಲ್ಲಿ ಸ್ವಾರ್ಥ, ಅವಲಂಬನೆ, ಅವಕಾಶ, ಜವಾಬ್ದಾರಿ, ಸಾಮಾಜಿಕ ಕಟ್ಟಳೆ ಇರುತ್ತದೆ.

ಆದರೆ, ಪ್ರೀತಿಯ ಉತ್ಕಟತೆಯಲ್ಲಿ,
ಪ್ರೀತಿ ನಿರಂತರತೆಯನ್ನು ಬೇಡುತ್ತದೆ.
ಪ್ರೀತಿ ಏರಿಕೆಯ ರೂಪದ ಸ್ಪಂದನೆಯನ್ನು ಬಯಸುತ್ತದೆ.
ಪ್ರೀತಿ ಮುಖವಾಡವನ್ನು ಬಯಲು ಮಾಡಿ ಸಹಜತೆಯನ್ನು ತೋರಿಸುತ್ತದೆ.
ಸಿಕ್ಕರೆ ಅಮೃತ,
ಸಿಗದಿದ್ದರೆ ವಿಷ,
ಯಶಸ್ವಿಯಾದರೆ ಸ್ವರ್ಗ,
ವಿಫಲವಾದರೆ ನರಕ....
ಹೇಳಿದಷ್ಟೂ ಇನ್ನೂ ಉದ್ದವಾಗುವ ಮುಗಿಯದ ಅಕ್ಷಯ ಪಾತ್ರೆ ಈ ಪ್ರೀತಿ......
ಪ್ರೀತಿ ಮತ್ತು ಜಾತಿ,
ಸಂಸ್ಕಾರ ಮತ್ತು ಬೆತ್ತಲೆ....

ಇಲ್ಲಿ ಯೋಚಿಸಬೇಕಾದ ವಿಷಯ ತುಂಬಾ ಇದೆ. ನಮ್ಮ ಮಕ್ಕಳು ನಮ್ಮ ಮನಸ್ಸಿಗೆ ವಿರುದ್ಧವಾಗಿ ಅತ್ಯಂತ ಬೇಜವಾಬ್ದಾರಿಯಿಂದ ಚಿಕ್ಕ ವಯಸ್ಸಿನಲ್ಲಿಯೇ ಪ್ರೀತಿಯ ಮೋಹಕ್ಕೆ ಬಲಿಯಾಗಿ ಮದುವೆ ಎಂಬ ಬಂಧನಕ್ಕೆ ಒಳಗಾಗುವ ಸನ್ನಿವೇಶದಲ್ಲಿ ಮಕ್ಕಳ ಮೇಲಿನ ಅತಿಯಾದ ಕಾಳಜಿಯಿಂದ ಪೋಷಕರಿಗೆ ನೋವಾಗುವುದು, ಬೇಸರವಾಗುವುದು, ಕೋಪ ಬರುವುದು ಭಾರತೀಯ ಸಾಂಪ್ರದಾಯಿಕ ಶೈಲಿಯ ವ್ಯವಸ್ಥೆಯಲ್ಲಿ ಸಹಜ ಸ್ವಭಾವವಾಗಿದೆ. ಅದನ್ನು ಒಪ್ಪಿಕೊಳ್ಳುತ್ತಾ.....

ಹಾಗೊಂದು ವೇಳೆ ನಮ್ಮ ಸ್ವಂತ ಮಕ್ಕಳು ಈ ರೀತಿಯ ಪ್ರೇಮ ಪಾಶಕ್ಕೆ ಸಿಲುಕಿದಾಗ ಪೋಷಕರ ಪ್ರತಿಕ್ರಿಯೆ ಹೇಗಿರಬೇಕು ಎಂಬ ವಾಸ್ತವ ಪ್ರಜ್ಞೆಯ ಹುಡುಕಾಟದಲ್ಲಿ......

ಪ್ರೀತಿ ಎಂಬ ಭಾವ ಅತ್ಯಂತ ಆಪ್ತವಾದುದು ಮತ್ತು ಆಳವಾದುದು. ಅದರ ಬಗ್ಗೆ ಗೌರವ, ಅಭಿಮಾನ ಇರಬೇಕು. ವಯಸ್ಕ ಗಂಡು ಹೆಣ್ಣಿನ ನಡುವಿನ ಈ ಪ್ರೀತಿ ಕ್ರಮೇಣ ಪ್ರೇಮವಾಗಿ ಮಾರ್ಪಡುತ್ತದೆ. ಅದು ಅಕ್ಷೇಪಾರ್ಹವೇನು ಅಲ್ಲ. ಆದರೆ ಸಮಯ, ಸಂದರ್ಭ, ಸನ್ನಿವೇಶ, ವಯಸ್ಸು ಇತ್ಯಾದಿಗಳು ಇಲ್ಲಿ ಸಾಮಾಜಿಕವಾಗಿ ಮುಖ್ಯವಾಗುತ್ತದೆ. ಜೊತೆಗೆ ದೇಹ ಮತ್ತು ಮನಸುಗಳು ಸಹ ಸಹಜವಾಗಿ ಇದಕ್ಕೆ ಪೂರಕವಾಗಿ ಪ್ರತಿಕ್ರಿಯಿಸುತ್ತವೆ. ಜಗತ್ತಿನ ಎಲ್ಲಾ ಮಾನವ ಜೀವಿಗಳಲ್ಲಿ ಇದು ಬಹುತೇಕ ಒಂದೇ ರೀತಿಯಲ್ಲಿ ಇರುತ್ತದೆ......

ಭಾರತದಲ್ಲಿ ಪ್ರೀತಿಯ ಜೊತೆಗೆ ಜಾತಿ ಸಹ ಒಂದು



ಬಹುಮುಖ್ಯ ಅಂಶವಾಗಿದೆ. ಯಾರು ಏನೇ ಹೇಳಿದರು ಎಷ್ಟೇ ತಡೆದರು ಹದಿಹರೆಯದವರಲ್ಲಿ ಪ್ರೀತಿ ಮೊಳಕೆ ಒಡೆಯುವುದು ಅತ್ಯಂತ ಸಹಜ ಪ್ರಕ್ರಿಯೆ. ಆದರೆ ಕೆಲವರು ಅದನ್ನು ನಿಯಂತ್ರಿಸಿಕೊಳ್ಳುತ್ತಾರೆ. ಇನ್ನೂ ಕೆಲವರು ಅದನ್ನು ನಿಯಂತ್ರಿಸಿಕೊಳ್ಳಲಾಗದೆ ಅದನ್ನು ಪ್ರಾಯೋಗಿಕವಾಗಿ ಜಾರಿಗೊಳಿಸುತ್ತಾರೆ......

ಹಾಗೆ ಜಾರಿಗೊಳಿಸುವವರು ನಮ್ಮ ಮಕ್ಕಳೂ ಆಗಿರಬಹುದು. ಆಗ ಭಾರತೀಯ ಸಮಾಜದಲ್ಲಿ ಜಾತಿ, ಧರ್ಮ, ಭಾಷೆ, ಹಣ, ಅಂತಸ್ತು, ಪ್ರದೇಶ, ಅಧಿಕಾರ ಮುಂತಾದ ಅನೇಕ ಅಡೆತಡೆಗಳು ಅಡ್ಡಿ ಬರುತ್ತವೆ. ಅದನ್ನು ನಾವು ಹೇಗೆ ನಿಭಾಯಿಸಬೇಕು ಎಂಬುದೇ ಬಹುದೊಡ್ಡ ಸವಾಲು ನಮ್ಮ ಮುಂದಿರುತ್ತದೆ. ಇಲ್ಲಿ ನಮ್ಮ ವೈಯಕ್ತಿಕ ಅಭಿಪ್ರಾಯಕ್ಕಿಂತ ಸಮಾಜದ ಮನಸ್ಥಿತಿ ಮತ್ತು ಪ್ರತಿಕ್ರಿಯೆ ನಮ್ಮ ಮೇಲೆ ಸಾಕಷ್ಟು ಪ್ರಭಾವ ಬೀರುತ್ತದೆ......

ನಮ್ಮ ಮುಂದೆ ಪ್ರೀತಿಸುವ – ದ್ವೇಷಿಸುವ, ಸ್ವೀಕರಿಸುವ – ತಿರಸ್ಕರಿಸುವ, ಮೌನವಾಗುವ – ಹಿಂಸಾತ್ಮಕವಾಗುವ, ಕ್ಷಮಿಸುವ – ದ್ವೇಷಿಸುವ, ತ್ಯಾಗದ – ಸ್ವಾರ್ಥದ, ಹೊಡೆದಾಡುವ – ಕಾನೂನಾತ್ಮಕ ಹೋರಾಡುವ, ಹೀಗೆ ನಾನಾ ಆಯ್ಕೆಗಳು ನಮ್ಮ ಮುಂದಿರುತ್ತವೆ. ನಾವು ಯಾವುದನ್ನು ಆಯ್ಕೆ ಮಾಡಿ, ಯಾವ ರೀತಿಯ ಪ್ರತಿಕ್ರಿಯೆ ನೀಡಬೇಕು ಎಂಬುದೇ ನಮ್ಮ ಸಂಸ್ಕಾರ, ಸಮಾಜ, ಧರ್ಮ , ವಿವೇಚನೆ ಮತ್ತು ಪ್ರಬುದ್ಧತೆ ಅವಲಂಬಿಸಿರುತ್ತದೆ......

ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಪ್ರೀತಿ ಸಹಜವಾಗಿಯೂ, ಮಧ್ಯಪ್ರಾಚ್ಯದ ಇಸ್ಲಾಮಿಕ್ ರಾಷ್ಟ್ರಗಳಲ್ಲಿ ಬಹುತೇಕ ಇದು ನಿಷೇಧವಾಗಿಯೂ, ಬೌದ್ಧ ಧರ್ಮದ ರಾಷ್ಟ್ರಗಳಲ್ಲಿ ಸ್ವಲ್ಪ ಪ್ರಮಾಣದಲ್ಲಿಯೂ ಇದನ್ನು ಪರಿಗಣಿಸಲಾಗಿದೆ. ಭಾರತದಲ್ಲಿ ಮಾತ್ರ ಇದು ಮಾತು ಮತ್ತು ಕೃತಿಯಲ್ಲಿ ಸಾಕಷ್ಟು ಗೊಂದಲ ಮತ್ತು ವ್ಯತ್ಯಾಸವಾಗಿದೆ...

ಪ್ರೇಮವೆಂಬುದು ಗಂಡು ಹೆಣ್ಣಿನ ನಡುವಿನ ಭಾವ ಸೆಳೆತ ಅಥವಾ ಆಕರ್ಷಣೆ. ಬಹುತೇಕ ಪ್ರಾಕೃತಿಕ ನಿರ್ಮಾಣ. ಸೃಷ್ಟಿಯ ನಿರಂತರ ಚಲನೆಗಾಗಿ ಅನಿವಾರ್ಯ ಕೂಡ...

ಸಾಮಾನ್ಯವಾಗಿ 18 ರಿಂದ 28 ರ ನಡುವಿನ ವಯೋಮಾನದ ಗಂಡು ಹೆಣ್ಣಿನ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯ ಪರಿಣಾಮ ಈ ಪ್ರೇಮ ಭಾವದ ಉತ್ಕಟತೆ ಉಂಟಾಗುತ್ತದೆ. ( ಇದಕ್ಕೆ ವಯಸ್ಸಿನ ಮಿತಿ ಇರುವುದಿಲ್ಲ ಎಂಬುದು ನಿಜವಾದರೂ ಪ್ರೇಮದ ತೀವ್ರತೆಯ ದೃಷ್ಟಿಯಿಂದ ಈ ವಯಸ್ಸನ್ನು ಕೇಂದ್ರ ಬಿಂದುವಾಗಿ ಇಟ್ಟುಕೊಳ್ಳಲಾಗಿದೆ )

ನಾಗರಿಕ ಸಮಾಜ ಸೃಷ್ಟಿಯಾಗಿ, ಅನುಭವಗಳು ಸಂಪ್ರದಾಯಗಳಾಗಿ, ಧಾರ್ಮಿಕ ನೀತಿ ನಿಯಮಗಳು ಸಮಾಜವನ್ನು ನಿಯಂತ್ರಿಸಿ ಕಾನೂನುಗಳು ಜಾರಿಯಾದ ಮೇಲೆ ಪ್ರೇಮ ಮತ್ತು ಲೈಂಗಿಕತೆ ಕೌಟುಂಬಿಕ ಚೌಕಟ್ಟಿನಲ್ಲಿ ಬಂಧಿಯಾಯಿತು. ನೈತಿಕತೆ – ಜವಾಬ್ದಾರಿ ಮತ್ತು ವಯೋಮಾನದ ಮಿತಿ ಹೇರಲಾಯಿತು.....

ಭಾರತೀಯ ಸಂಪ್ರದಾಯವಾದಿಗಳ ಮುಖ್ಯ ಆಕ್ಷೇಪಣೆ ಪ್ರೇಮ, ಕಾಮ, ಪ್ರಣಯ ಎಲ್ಲವೂ ಕೌಟುಂಬಿಕ ಚೌಕಟ್ಟಿನಲ್ಲಿ ಇರಬೇಕಾದ ಕ್ರಿಯೆಗಳು, ಮುಖ್ಯವಾಗಿ ಮಹಿಳೆ ಪೂಜನೀಯಳು ಮತ್ತು ಭೋಗದ ಸಂಪನ್ಮೂಲ, ಮಹಿಳೆಯರು ಅಬಲೆಯರು, ಈ ವಿಷಯದಲ್ಲಿ ಹೆಚ್ಚು ಮುಕ್ತವಾದರೆ ಪುರುಷರಿಂದ ವಂಚನೆಗೆ ಒಳಗಾಗುವ ಸಾಧ್ಯತೆಗಳೇ ಹೆಚ್ಚು. ಆದ್ದರಿಂದ ಮುಕ್ತ ಸ್ವಾತಂತ್ರ್ಯ ಬೇಡ ಮುಂತಾದ ಕಾರಣಗಳನ್ನು ಹೇಳುತ್ತಾರೆ. ಸಿನಿಮಾ – ಸಾಹಿತ್ಯ ಪ್ರಕಾರಗಳಲ್ಲೂ ಹೆಣ್ಣಿನ ಶೀಲ ರಕ್ಷಣೆಯೇ ಜೀವನದ ಪರಮೋದ್ದೇಶ ಎಂದು ಬಿಂಬಿಸಲಾಗುತ್ತದೆ.....

ಹಾಗೆಯೇ ಪ್ರಗತಿಪರ ಚಿಂತಕರು ಪ್ರೀತಿಗೆ ನಿಷೇಧ ಬೇಡ. ಹೆಣ್ಣು ಕೂಡ ಈ ಪ್ರಕೃತಿಯ ಸಹಜ ಪ್ರಾಣಿ. ಗಂಡಿನಷ್ಟೇ ಸಮ ಪ್ರಮಾಣದ ಸ್ವಾತಂತ್ರ್ಯ ಸಮಾನತೆಗೆ ಹಕ್ಕುದಾರಳು. ಆಕೆಯನ್ನು ಅನಾವಶ್ಯಕವಾಗಿ ವಿಶೇಷ ದೈವಿಕ ಮಹತ್ವ ನೀಡಿ ವೈಭವೀಕರಿಸಿ ಆಕೆಯನ್ನು ನಿಯಂತ್ರಿಸುವ ಹುನ್ನಾರ ಬೇಡ. ಆಕೆ ಪೂಜನೀಯಳು ಅಲ್ಲ. ಭೋಗದ ವಸ್ತುವೂ ಅಲ್ಲ. ಒಂದು ಸಹಜ ಜೀವಿ ಮಾತ್ರ. ಜೊತೆಗೆ ಪ್ರೇಮವೆಂಬುದು ಪ್ರಕೃತಿಯ ಸಹಜ ನಿಯಮ. ಅದು ಕಾನೂನಿನ ವ್ಯಾಪ್ತಿಯಲ್ಲಿ ಸಂಭವಿಸಲಿ ಬಿಡಿ ಎನ್ನುವ ವಾದ ಮಂಡಿಸುತ್ತಾರೆ...

ಈ ವಿಷಯದಲ್ಲಿ ಸಾಮಾನ್ಯ ಜನರದು ಬಹುತೇಕ ದ್ವಂದ್ವ ನಿಲುವು ಕಂಡುಬರುತ್ತದೆ. ಪ್ರೀತಿ ಪ್ರೇಮ ಪ್ರಣಯದ ಬಗ್ಗೆ ಸಿನಿಮಾ, ಸಾಹಿತ್ಯ, ಧಾರಾವಾಹಿ, ಉದ್ಯಮಿಗಳು ಮುಂತಾದ ಜನಪ್ರಿಯರ ವಿಷಯದಲ್ಲಿ ಮುಕ್ತ ಸ್ವಾತಂತ್ರ್ಯವನ್ನು ಖುಷಿಯಿಂದ ಅನುಭವಿಸುತ್ತಾರೆ ಮತ್ತು ಒಪ್ಪಿಕೊಳ್ಳುತ್ತಾರೆ. ವಿಚ್ಛೇದನ ವಿಷಯದಲ್ಲೂ ಅವರ ಬಗ್ಗೆ ಸಹಾನುಭೂತಿ ಹೊಂದಿರುತ್ತಾರೆ. ಆದರೆ ತಮ್ಮ ಮನೆಯಲ್ಲಿ ಅಥವಾ ತಮ್ಮ ಪರಿಚಯದವರಲ್ಲಿ ಈ ರೀತಿಯ ಮುಕ್ತತೆಯನ್ನು ಅನೈತಿಕ ಎಂಬುದಾಗಿ ಭಾವಿಸುತ್ತಾರೆ ಮತ್ತು ತಿರಸ್ಕರಿಸುತ್ತಾರೆ ಹಾಗು ಕೆಲವೊಮ್ಮೆ ದ್ವೇಷಿಸುತ್ತಾರೆ ಸಾಧ್ಯವಾದರೆ ಬಹಿಷ್ಕರಿಸುತ್ತಾರೆ ಮತ್ತು ಹಿಂಸಿಸುತ್ತಾರೆ. ಎಷ್ಟೊಂದು ಆತ್ಮವಂಚನೆಯಲ್ಲವೇ.....

ಯಾರೋ ಅಪರಿಚಿತ ನಾಯಕ ನಾಯಕಿಯರ ಮುತ್ತುಗಳು ಸಹನೀಯ. ನಮ್ಮ ಹತ್ತಿರದವರ ಈ ನಡವಳಿಕೆ ಅನೈತಿಕ.....

ಈ ಎಲ್ಲದರ ಸಮೀಕರಣದ ನಂತರ ಇಂದಿನ ಆಧುನಿಕ ಸಮಾಜದಲ್ಲಿ........

ಹಿಂದಿನ ಕೆಲವು ದಶಕಗಳ ಹಿಂದೆ ಇದ್ದ ಗಂಡು ಹೆಣ್ಣಿನ ಭಾವ ತೀವ್ರತೆ ಈಗ ಉಳಿದಿಲ್ಲ. ಹೆಣ್ಣು ಗಂಡನಿಷ್ಟೇ ಉದ್ಯೋಗಸ್ಥೆಯಾದ ಬಳಿಕ ಎಲ್ಲಾ ಕಡೆ ಮುಕ್ತ ಓಡಾಟ ಇರುವುದರಿಂದ ಹೆಣ್ಣಿನ ಬಗ್ಗೆ ಇದ್ದ ಕುತೂಹಲ ಸಹ ಕಡಿಮೆಯಾಗಿದೆ. ಪ್ರೇಮ ನಿವೇದನೆ ಗಂಡಿನ ಜವಾಬ್ದಾರಿ ಎನ್ನುವ ಪರಿಕಲ್ಪನೆ ಈಗ ಉಳಿದಿಲ್ಲ. ಅದರಲ್ಲೂ ನಗರೀಕರಣದ ನಂತರ ಹೆಣ್ಣಿನ ಪ್ರಭಾವವೇ ಹೆಚ್ಚಾಗಿರುವ ಅನುಭವವಾಗುತ್ತಿದೆ. ಟಿವಿ ಮಾಧ್ಯಮಗಳ ಮನರಂಜನಾ ಉದ್ಯಮದಲ್ಲಿ ಹಾಸ್ಯ ಸನ್ನಿವೇಶಗಳಲ್ಲಿ ಬಹುತೇಕ ಹೆಣ್ಣು ಗಂಡಿನ ಮೇಲೆ ನಿಯಂತ್ರಣ ಸಾಧಿಸಿರುವುದೇ ವಿಷಯವಾಗಿರುವುದನ್ನು ಗಮನಿಸಬಹುದು....

ಆದ್ದರಿಂದ ಈಗ ಅಂತಹ ಭಯಪಡುವ ಅವಶ್ಯಕತೆ ಇಲ್ಲ. ಈ ಬಗ್ಗೆ ಗಂಭೀರವಾಗಿ ಯೋಚಿಸುವ ಅವಶ್ಯಕತೆಯೂ ಇಲ್ಲ. ಇದು ಸಹಜವಾಗಿ ನಡೆಯುತ್ತದೆ.

ಎಂದಿನಂತೆ ಸಂಪ್ರದಾಯವಾದಿ ಪೋಷಕರು ತಮ್ಮ ಮಕ್ಕಳ ನಡವಳಿಕೆಯ ಬಗ್ಗೆ ತಿಳಿವಳಿಕೆ ಮೂಡಿಸಲಿ......

ಇಡೀ ಸಮಾಜ ಉತ್ತಮ ವಾತಾವರಣದಲ್ಲಿ, ಒಳ್ಳೆಯ ನಂಬಿಕೆಯ ಪರಿಸ್ಥಿತಿಯಲ್ಲಿ ಇದ್ದರೆ ಯಾವ ಪ್ರೀತಿ ಪ್ರೇಮಗಳು ಸಮಸ್ಯೆಯಲ್ಲ. ಆದರೆ ವಂಚಕರು, ಮೋಸಗಾರರೇ ಹೆಚ್ಚಾದರೆ ಧಾರ್ಮಿಕ ಹಬ್ಬಗಳನ್ನು ಸಹ ಎಚ್ಚರಿಕೆಯಿಂದ ಆಚರಿಸಬೇಕಾದ ಸ್ಥಿತಿ ನಿರ್ಮಾಣವಾಗುತ್ತದೆ. ಆದ್ದರಿಂದ ಮೊದಲು ಒಳ್ಳೆಯ ವ್ಯಕ್ತಿತ್ವಗಳನ್ನು ರೂಪಿಸಿಕೊಳ್ಳುವ ನಿಟ್ಟಿನಲ್ಲಿ ನಾವು ಪ್ರಯತ್ನಿಸೋಣ. ಇಲ್ಲದಿದ್ದರೆ ಕಳ್ಳರ ಸಂತೆಯಲ್ಲಿ ಎಲ್ಲರೂ ಅನುಮಾ,ನ ಅವಮಾನದಲ್ಲಿ ಬದುಕಬೇಕಾಗುತ್ತದೆ.......

ಆದ್ದರಿಂದ ದಯವಿಟ್ಟು ಯುವಕ ಯುವತಿಯರ ಪ್ರೀತಿ ಪ್ರೇಮದ ವಿಷಯದಲ್ಲಿ ಸ್ವಲ್ಪ ಉದಾರವಾದಿಗಳಾಗಿ. ಅದನ್ನು ಪ್ರೋತ್ಸಾಹಿಸುವುದು ಬೇಡ, ತಿರಸ್ಕರಿಸುವುದು ಬೇಡ, ಅವಮಾನ ಎಂದು ಭಾವಿಸುವುದು ಬೇಡ, ಹಿಂಸಾತ್ಮಕವಾಗಿ ವರ್ತಿಸುವುದು ಬೇಡ. ಅದೊಂದು ಸಹಜ ಕ್ರಿಯೆ. ಪರಿಸ್ಥಿತಿಯನ್ನು ಅವಲಂಬಿಸಿ ತಾಳ್ಮೆಯಿಂದ ನಿರ್ವಹಿಸೋಣ. ಯಾವುದೇ ಜಾತಿ, ಧರ್ಮ, ಹಣ, ಅಧಿಕಾರದ ಅಹಂಕಾರಕ್ಕೆ ಬಲಿಯಾಗಿ ಅನಾಗರಿಕವಾಗಿ ಪ್ರತಿಕ್ರಯಿಸದಿರೋಣ. ಇನ್ನೊಬ್ಬರ ಬಗ್ಗೆ ಕೆಟ್ಟದ್ದಾಗಿ ಮಾತನಾಡದಿರೋಣ. ನಮ್ಮ ಮನೆಯಲ್ಲಿಯೂ ಇದು ಸಂಭವಿಸುಬಹುದು ಎಂಬ ಪ್ರಜ್ಞೆಯಲ್ಲಿ ಇರೋಣ......

# ಬೆಸ್ಕಾಂ ಇಲಾಖೆಯ ಅಧಿಕಾರಿಗಳ ವಿರುದ್ಧ ಲೋಕಾಯುಕ್ತರಿಗೆ ದೂರು ಸಲ್ಲಿಸಿದ ಭೀಮ್ ಆರ್ಮಿ ಸಂಘಟನೆ

ತುಮಕೂರು : ತುಮಕೂರು ಜಿಲ್ಲೆಯ ಮಧುಗಿರಿ ಬೆಸ್ಕಾಂ ವಿಭಾಗ ಕಛೇರಿಯಲ್ಲಿ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಕಿರಿಯ ನೌಕರನಾದ ಮಹೇಶ್ ಬಿ.ಜೆ ರವರಿಗೆ ಪ್ರಭಾರ ಸಹಾಯಕ ಲೆಕ್ಕಾಧಿಕಾರಿಯಾಗಿ ಪ್ರಭಾರ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸುವಂತೆ ಚಿತ್ರದುರ್ಗ ಕಾರ್ಯ ಮತ್ತು ಪಾಲನಾ ವಿಭಾಗದ ಮುಖ್ಯ ಇಂಜಿನಿಯರ್ (ವಿ). ರವರು ಆದೇಶಿಸಿರುತ್ತಾರೆ. ಸದರಿ ಆದೇಶವು ಕಂಪನಿಯ ನಿಯಮಾವಳಿಗಳಿಗೆ ತದ್ವಿರುದ್ಧವಾಗಿರುತ್ತದೆ. ಕಾರಣ ಮಹೇಶ್ ಬಿ.ಜಿ ರವರಿಗಿಂತ ವಿಭಾಗ ಕಛೇರಿಯಲ್ಲಿ ಹಿರಿಯ ನೌಕರರಾಗಿರುವ

ರಾಮಯ್ಯ ಆರ್ ರವರು ಹಿರಿಯ ಸಹಾಯಕ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಆದರೆ ಏಕಏಕಿ ರಾಮಯ್ಯ ಆರ್ ಇವರ ಸೇವಾ ಹಿರಿತನವನ್ನು ಪರಿಗಣಿಸದೇ ರಾಮಯ್ಯ ಆರ್. ರವರಿಗಿಂತ ಜೇಷ್ಟತಾ ಆಧಾರದಲ್ಲಿ ಕಿರಿಯ ನೌಕರರಾಗಿರುವ ಮಹೇಶ್ ಬಿ.ಜಿ ರವರಿಗೆ ಮೇಲ್ಕಂಡಂತೆ ಪ್ರಭಾರ ಸಹಾಯಕ ಲೆಕ್ಕಾಧಿಕಾರಿ ಹುದ್ದೆ ವಹಿಸಲಾಗಿರುತ್ತದೆ ಎಂದು ಆರೋಪಿಸಿ ಭೀಮ್ ಆರ್ಮಿ ಸಂಘಟನೆಯ ವತಿಯಿಂದ ಲೋಕಾಯುಕ್ತರಿಗೆ ದೂರನ್ನು ಸಲ್ಲಿಸಿರುತ್ತಾರೆ. ತಮ್ಮ ದೂರಿನಲ್ಲಿ ಜೇಷ್ಠತೆಯಲ್ಲಿ ಹಿರಿಯ ವೃಂದ ಮತ್ತು ಸೇವಾ ಹಿರಿತನದಲ್ಲಿ ಹಿರಿಯ ನೌಕರರು ಕಿರಿಯ ನೌಕರನ ಆಧೀನದಲ್ಲಿ ಕರ್ತವ್ಯನಿರ್ವಹಿಸಲು ಮುಜುಗರವಾಗುತ್ತದೆಂದು



ರಾಮಯ್ಯ ಆರ್, ಹಿರಿಯ ಸಹಾಯಕ, ಮಧುಗಿರಿ ರವರು ಮೇಲಾಧಿಕಾರಿಗಳಿಗೆ ಪದೇ ಪದೇ ಮನವಿ ಸಲ್ಲಿಸಿರುತ್ತಾರೆ. ಮೇಲಧಿಕಾರಿಗಳು ಇವರ ಮನವಿಯನ್ನು ತಿರಸ್ಕರಿಸಿ ಕಿರಿಯ ಸಹಾಯಕ ನೌಕರನಾದ ಮಹೇಶ್ ಬಿ.ಜಿ, ರವರಿಗೆ ಪ್ರಭಾರ ಸಹಾಯಕ ಲೆಕ್ಕಾಧಿಕಾರಿಯಾಗಿ ಲೆಕ್ಕಾಧಿಕಾರಿಯಾಗಿ ಕರ್ತವ್ಯನಿರ್ವಹಿಸುವಂತೆ ಆದೇಶಿಸಿರುತ್ತಾರೆ ಇಷ್ಟೆಲ್ಲಾ ಬೆಳವಣಿಗೆಗಳ ನಡುವೆ ಯಾವುದೋ ರಾಜಕೀಯ ಒತ್ತಡಕ್ಕೆ ಅಥವಾ ವೈಯಕ್ತಿಕ ಲಾಭಕ್ಕೆ ಮಣಿದು ಹಾಗೂ ಇಲಾಖೆಯ ಹಿರಿಯ ನೌಕರರ ಕರ್ತವ್ಯ ನಿಷ್ಠೆಗೆ ಬೆಲೆ ಕೊಡದೇ, ಹಿರಿಯ ನೌಕರರನ್ನು ಕಡೆಗಣಿಸಿ ಮಹೇಶ್ ಬಿ.ಜಿ.ರವರಿಗೆ ಪ್ರಭಾರ ಸಹಾಯಕ ಲೆಕ್ಕಾಧಿಕಾರಿಯಾಗಿ ಮುಂದುವರೆಸುವಂತೆ ಆದೇಶಿಸಿರುತ್ತಾರೆಂದು ಉಲ್ಲೇಖ ಮಾಡಿದ್ದಾರೆ.

ಹಿರಿಯ ನೌಕರರ ಮನೋಸ್ಥೈರ್ಯವನ್ನು ಕುಗ್ಗಿಸುವಂತಹ ಕೆಲಸ ಮಾಡಿರುವ ಹಿರಿಯ ಅಧಿಕಾರಿಗಳ ಹಾಗೂ ತಪ್ಪಿತಸ್ಥರ ವಿರುದ್ಧ ಕಾನೂನು ಪ್ರಕಾರ ಕ್ರಮಕೈಗೊಳ್ಳುವಂತೆ ಹಾಗೂ ಮುಖ್ಯವಾಗಿ ಹಿರಿಯ ನೌಕರರಿಗೆ ನ್ಯಾಯ ಒದಗಿಸಿಕೊಡುವಂತೆ ಈ ಮೂಲಕ ದೂರಿನಲ್ಲಿ ಉಲ್ಲೇಖಿಸಲಾಗಿದೆ ಎಂದು ಭೀಮ್ ಆರ್ಮಿ ಸಂಘಟನೆಯ ಜಿಲ್ಲಾಧ್ಯಕ್ಷರಾದ ಅಯ್ಯನಪಾಳ್ಯ ಶ್ರೀನಿವಾಸ್ ತಮ್ಮ ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿರುತ್ತಾರೆ.

ದೂರು ಸಲ್ಲಿಸುವ ಸಂದರ್ಭದಲ್ಲಿ ಭೀಮ್ ಆರ್ಮಿ ಜಿಲ್ಲಾ ಕಾರ್ಯಾಧ್ಯಕ್ಷರಾದ ಕೀರ್ತಿ ದೊಡ್ಡಗುಣಿ, ಮಧುಗಿರಿ ತಾಲ್ಲೂಕು ಅಧ್ಯಕ್ಷರಾದ ನಟರಾಜ್ ಮೌರ್ಯ ಸೇರಿದಂತೆ ಇತರೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

# ಅಂತರಾಷ್ಟ್ರೀಯ ಮಟ್ಟದ ಕರಾಟೆ ಪಂದ್ಯದಲ್ಲಿ ಚಿನ್ನದ ಪದಕ ಗೆದ್ದ ಹಳ್ಳಿ ಪ್ರತಿಭೆಗೆ ಅಭಿನಂದನೆ

ಶಿರಾ : ಪುಟ್ಟ ಗ್ರಾಮದಲ್ಲಿ ಹುಟ್ಟಿ ಬಡತನವನ್ನು ಮೆಟ್ಟಿನಿಂತು ಸಾಧನೆ ಬೆನ್ನಟ್ಟಿ ಹೊರಟು ನೇಪಾಳ ದೇಶದ ಕಟ್ಮಂಡು ನಲ್ಲಿ ಅಂತರಾಷ್ಟ್ರೀಯ ಮಟ್ಟದ ಕರಾಟೆ ಪಂದ್ಯಾವಳಿಗಳಲ್ಲಿ ಪಾಲ್ಗೊಂಡು ಮಲೇಶಿಯಾ ಹಾಗೂ ಥೈಲ್ಯಾಂಡ್ ಕರಾಟೆ ಪಟುಗಳ ವಿರುದ್ಧ ಸೆಣಸಾಡಿ ಗೆದ್ದು ಚಿನ್ನದ ಪದಕ ಪಡೆದ ಹೇರೂರು ಗ್ರಾಮದ ಹೆಚ್.ಆರ್.ಜಾನವಿ ದೇಶಕ್ಕೆ ಕೀರ್ತಿ ತಂದು ಗ್ರಾಮಾಂತರ ಪ್ರದೇಶದಲ್ಲಿ ಬಡ ಹೆಣ್ಣುಮಕ್ಕಳಿಗೆ ಸ್ಫೂರ್ತಿದಾಯಕರಾಗಿ ಹೊರ ಹೊಮ್ಮಿರುವುದು ನಮ್ಮ ತಾಲ್ಲೂಕಿಗೆ ಹೆಮ್ಮೆ ವಿಷಯ ಎಂದು ಕಾಂಗ್ರೆಸ್ ಹಿರಿಯ ಮುಖಂಡ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರದ ಸಂಘದ ಮಾಜಿ ಅಧ್ಯಕ್ಷ ಹುಣಸೇಹಳ್ಳಿ ಹೆಚ್. ಪಿ. ಶಶಿಧರ್ ಶ್ಲಾಗಿಸಿದರು.






ಅವರು ಹುಣಸೆ ಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಹಾಗೂ ಅನೇಕ ಗಣ್ಯರಿಂದ ಹೇರೂರು ಶ್ರೀ ಲಕ್ಷ್ಮೀ ರಂಗನಾಥ ಸ್ವಾಮಿ ಸಮುದಾಯ ಭವನದಲ್ಲಿ ಆಯೋಜಿಸಲಾಗಿದ್ದ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಅಂತರಾಷ್ಟ್ರೀಯ ಮಟ್ಟದ ಕರಾಟೆ ಪಂದ್ಯದಲ್ಲಿ ಚಿನ್ನದ ಪದಕ ಗೆದ್ದ ಶಿರಾ ತಾಲೂಕಿನ ಹೇರೂರು ಗ್ರಾಮದ ಎಚ್.ಆರ್. ಜಾನವಿ ಶ್ರೀ ಶಾರದಾ ಹಿರಿಯ ಪ್ರಾಥಮಿಕ ಪಾಠಶಾಲೆ, ಜವಗೊಂಡನಹಳ್ಳಿ 8ನೇ ತರಗತಿ ವಿದ್ಯಾರ್ಥಿನಿ 45 ಕೆ ಜಿ ಒಳಗಿನ ಬಾಲಕೀಯರ ವಿಭಾಗದ ಸ್ಪರ್ಧೆಯಲ್ಲಿ ನಮ್ಮ ದೇಶವನ್ನು ಪ್ರತಿನಿಧಿಸಿ ಪ್ರಥಮ ಸ್ಥಾನ ಪಡೆದು ಚಿನ್ನದ ಪದಕ ಗೆದ್ದು ದೇಶಕ್ಕೆ ಕೀರ್ತಿ ತಂದುಕೊಟ್ಟಿದ್ದಾರೆ, ಇವರ ಕರಾಟೆ ಮತ್ತು ಬಾಕ್ಸಿಂಗ್ ತರಬೇತಿದರರಾದ ರಂಗಸ್ವಾಮಿಗೆ ಹಾಗೂ ಶಾಲಾ ಆಡಳಿತಕ್ಕೆ ನಮ್ಮ ಸುತ್ತ ಮುತ್ತಲಿನ ಗ್ರಾಮಸ್ಥರ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಅಭಿನಂದನ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಶಿರಾ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶಿವು ಚಂಗಾವರ,

ಪ್ರತಿ ಭೆಗಳು ಹೇಗೆ ಎಲ್ಲಿ ಹೊರಹೊಮ್ಮುತ್ತಾರೋ ಯಾರು ಸಹ ಊಹಿಸಲಾಗದು, ತಾಲ್ಲೂಕಿನ ಕುಗ್ರಾಮದ ಬಡ ರೈತ ಕುಟುಂಬದ ಹೆಚ್ .ಟಿ. ರಂಗನಾಥ್ ಮತ್ತು ಲಕ್ಷ್ಮಿ ದಂಪತಿಗಳ ಪುತ್ರಿ ಹೆಚ್. ಆರ್ .ಜಾನವಿ ಹಿರಿಯೂರು ತಾಲ್ಲೂಕಿನ ಜವಗೊಂಡನಹಳ್ಳಿ ಶ್ರೀ ಶಾರದಾ ಶಾಲೆಯಲ್ಲಿ ಎಂಟನೇ ತರಗತಿ ಯಲ್ಲಿ ವ್ಯಾಸಂಗ ಮಾಡುತ್ತಿದ್ದು ಇವರ ಈ ಸಾಧನೆ ತಾಲ್ಲೂಕಿಗೆ ಅಲ್ಲದೆ ದೇಶಕ್ಕೆ ಹೆಮ್ಮೆಯ ವಿಷಯ, ಇವರ ಮುಂದಿನ ಕನಸುಗಳ ಸಾಧನೆಗೆ ದಾರಿ ದೀಪಾವಗುವ ಮಹಾದಾಸೆ ನನ್ನದಾಗಿದ್ದು ಇವರ ಮುಂದಿನ ಶೈಕ್ಷಣಿಕ ಹಾಗೂ ಕ್ರೀಡೆಗೆ ಸಹಕಾರ ನೀಡುವುದಾಗಿ ತಿಳಿಸಿದರು.

ಹುಣಸೆಹಳ್ಳಿ ಸಹಕಾರ ಸಂಘದ ನೂತನ ಅಧ್ಯಕ್ಷ ಹೆರೂರು ಹೆಚ್. ಲಕ್ಷ್ಮೀರಾಜ್ ಮಾತನಾಡಿ, ಮೊದಲು ತಂದೆ ತಾಯಂದಿರು ಮಕ್ಕಳು ಯಾವುದರಲ್ಲಿ ಆಸಕ್ತಿ ಹೊಂದಿದ್ದಾರೆ ಎನ್ನುವುದನ್ನು ಮನಗಂಡು ಅವರ ಆಸಕ್ತಿಗೆ ಸೂಕ್ತ ಸಲಹೆ ಸೂಚನೆ ನೀಡುವುದರ ಗಮನಹರಿಸಬೇಕು, ಶಾಲೆಗಳಲ್ಲಿ ಶಿಕ್ಷಕರು ಇಂತಹ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಇಂತಹ ಸಾಧನೆಗೈಯಲು ಪ್ರೇರಣೆಯಾಗಿ ಸೂಕ್ತ ಮಾರ್ಗದರ್ಶನ ನೀಡಿ ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ ಎಂದರು.

ಎಪಿಎಂಸಿ ಮಾಜಿ ಅಧ್ಯಕ್ಷ ಎ. ಆರ್.ಶಶಿಧರ್ ಗೌಡ ಮಾತನಾಡಿ, ಸಾಧನೆಯ ಬೆನ್ನಟ್ಟಿ ಹೊರಟಿರುವ ತಾಲ್ಲೂಕಿನ ಮಕ್ಕಳು ಯಾವುದೇ ಕಾರಣಕ್ಕೂ ಅಂಜಬೇಡಿ, ನಿಮ್ಮ ಸಾಧನೆಗೆ ಬಡತನ ಶಾಪವಲ್ಲ, ನಿಮ್ಮ ಕನಸಿಗೆ ರೆಕ್ಕೆಯಾಗಿ ನಮ್ಮಂತಹ ಎಷ್ಟೋ ಉದಾರ ಮನಸುಗಳು ಇದ್ದಾರೆ, ನಿಮಗೆ ಎಂತಹ ಪರಿಸ್ಥಿ ಎದುರಾದರೂ ನಿಮ್ಮ ಜೊತೆ ನಾವಿದ್ದೇವೆ ಎನ್ನುವ ಮಾತುಗಳನ್ನಾಡಿ ಆತ್ಮ ವಿಶ್ವಾಸ ಮೂಡಿಸಿದರು.

ನಿರ್ದೇಶಕರುಗಳಾದ ಎಚ್. ಕೆ. ಬೋಜರಾಜು, ಪಾಂಡುರಂಗಪ್ಪ, ಭಾಗ್ಯಮ್ಮ, ನಿರ್ಮಲ, ಸಾಕಮ್ಮ, ಪುಟ್ಟಬೀರಜ್ಜಯ್ಯ, ಹುಣಸೆಹಳ್ಳಿ ಗ್ರಾ.ಪಂ. ಅಧ್ಯಕ್ಷೆ ರೇಖಾ ತಿಪ್ಪೇಸ್ವಾಮಿ, ಮಾಜಿ ಅಧ್ಯಕ್ಷ ಹನುಮಂತರಾಯ, ಮುಖಂಡ ರಾಜಣ್ಣ ಸೇರಿದಂತೆ ಹಲವಾರು ಮುಖಂಡರು ಇದ್ದರು.

ಇದೇ ಸಂದರ್ಭದಲ್ಲಿ ಕರಾಟೆ ಮತ್ತು ಬಾಕ್ಸಿಂಗ್ ತರಬೇತಿದರರಾದ ರಂಗಸ್ವಾಮಿ, ಶಾಲೆಯ ಮುಖ್ಯೋಪಾಧ್ಯಾಯ ರಾಕೇಶ್ ಹಾಗೂ ಚಿನ್ನದ ಪದಕ ಗೆದ್ದ ವಿದ್ಯಾರ್ಥಿನಿಗೆ ಹುಣಸೆ ಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಹಾಗೂ ಅನೇಕ ಗಣ್ಯರಿಂದ ಹೇರೂರು ಶ್ರೀ ಲಕ್ಷ್ಮೀ ರಂಗನಾಥ ಸನ್ನಿಧಿಯಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

# ಸರ್ಕಾರಿ ನೌಕರರ ಕ್ರೀಡಾಕೂಟ: ಕ್ರಿಕೆಟ್ ಪಂದ್ಯಾವಳಿಯಲ್ಲಿ ಜಿಲ್ಲಾಸ್ಪತ್ರೆ ತಂಡ ಪ್ರಥಮ: ಅಭಿನಂದನೆ



ತುಮಕೂರು: ನಗರದಲ್ಲಿ ನಡೆದ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಮಟ್ಟದ ಕ್ರೀಡಾಕೂಟದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಜಿಲ್ಲಾಸ್ಪತ್ರೆ ತಂಡ ಪ್ರಥಮ ಬಹು ಮಾನ ಪಡೆಯಿತು. ವಿಜೇತ ತಂಡವನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಚಂದ್ರಶೇಖರ್, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಅಸ್ಗರ್ ಬೇಗ್ ಅಭಿನಂದಿಸಿದರು.

ಈ ವೇಳೆ ಮಾತನಾಡಿದ ಡಾ.ಅಸ್ಗರ್ ಬೇಗ್, ಆರೋಗ್ಯ ಇಲಾಖೆ ಸಿಬ್ಬಂದಿ ಆರೋಗ್ಯದಲ್ಲಿ ದೃಢಕಾಯರಾಗಿ, ಕ್ರೀಡೆಯಲ್ಲೂ ಸಾಧನೆ ಮಾಡುವ ಮೂಲಕ ಇತರೆ ಇಲಾಖೆಗೆ ಪ್ರೇರಣೆ ಆಗಿರುವಿರಿ ಎಂದು ಶ್ಲಾಘಿಸಿ, ದೈನಂದಿನ ಒತ್ತಡದ ಕೆಲಸದ ನಡುವೆ ಕ್ರೀಡಾಸಕ್ತಿ ಬೆಳೆಸಿಕೊಂಡರೆ ಲವಲವಿಕೆಯಿಂದ ಇರಬಹುದು. ಉತ್ಸಾಹಿಗಳಾಗಿ ಚುರುಕಿನಿಂದ ಕೆಲಸಕಾರ್ಯ ಮಾಡಬಹುದು ಎಂದು ಹೇಳಿದರು.

ಜಿಲ್ಲಾ ಆಸ್ಪತ್ರೆ ಕ್ರಿಕೆಟ್ ತಂಡದ ನಾಯಕ ಸಂತೋಷ್ ಹೊಸಮನಿ, ಡಾ.ಸುರೇಶ್, ಡಾ.ಸಿದ್ದೇಶ್, ಡಾ.ಲೋಕೇಶ್, ಮಂಜುನಾಥ್ ಹೆಚ್.ಡಿ, ಮಂಜು ಗುಡಿ ಮನಿ, ರಾಮು ಪೂಜಾರಿ, ಬಸವರಾಜ ದೊಡ್ಡಮನಿ, ನವೀನ್‌ಕುಮಾರ್, ಶರತ್, ಸಮೀರ್ ಶಾಹಿದ್, ರಘುನಂದನ್, ವೇದಮೂರ್ತಿ ಅವರನ್ನು ಅಭಿನಂದಿಸಿ ಶುಭ ಕೋರಿದರು.

ವಿಜೇತ ತಂಡವಾಗಿ ಪ್ರಶಸ್ತಿ ಸ್ವೀಕಾರ ಸಮಾರಂಭದಲ್ಲಿ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ರಮೇಶ್, ಜಿಲ್ಲಾ ಕಾರ್ಯಾಧ್ಯಕ್ಷ ಗೋಪಿನಾಥ್, ಜಿಲ್ಲಾ ಉಪಾಧ್ಯಕ್ಷ ಮಂಜುನಾಥ್ ಹೆಚ್.ಡಿ, ಹಿರಿಯ ಉಪಾಧ್ಯಕ್ಷರಾದ ಜಿ.ಎನ್.ರಾಧಾಪ್ಪ, ಪದ್ಮರಾಜು, ಕಾರ್ಯದರ್ಶಿಗಳಾದ ಪರಮೇಶ್, ಶಿವಶಂಕರ್, ಜಿಲ್ಲಾ ಕ್ರೀಡಾ ಕಾರ್ಯದರ್ಶಿಗಳಾದ ಹರೀಶ್, ಪ್ರವೀಣ್, ಸಹಕಾರ್ಯದರ್ಶಿ ಷಡಕ್ಷರಿ ಸೇರಿದಂತೆ ನಿರ್ದೇಶಕರು, ಪದಾಧಿಕಾರಿಗಳು ಹಾಜರಿದ್ದರು.

ವಿವಿಧ ಸ್ಪರ್ಧೆಗಳಲ್ಲಿ ಜಿಲ್ಲಾಸ್ಪತ್ರೆ ಸಿಬ್ಬಂದಿಗಳು ಭಾಗವಹಿಸಿದ್ದರು. ಟೇಬಲ್ ಟೆನ್ನೀಸ್‌ನಲ್ಲಿ ಎ.ಆರ್.ಸೌಭಾಗ್ಯ, ಕೇರಂನಲ್ಲಿ ಡಾ.ದೀಪಾಲಿ, ಶಟಲ್ ಬ್ಯಾಡ್ಮಿಂಟನ್‌ನಲ್ಲಿ ರೂಪಾದೇವಿ, ಹರ್ಡಲ್ಸ್ ಮತ್ತು ಪವರ್ ಲಿಫ್ಟಿಂಗ್‌ನಲ್ಲಿ ಎಂ.ಸಿ.ಸುವರ್ಣ ಬಹುಮಾನ ಪಡೆದರು.

ಇದರಂಗವಾಗಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಿರುನಾಟಕ ಮತ್ತು ಜಾನಪದ ನೃತ್ಯದಲ್ಲಿ ಬಿ.ಸಿ.ರಮ್ಯಾ, ಎನ್.ಎಸ್.ಗುಣವತಿ ಬಹುನಮಾನ ಗಳಿಸಿದರು.



ಡಿಹೆಚ್‌ಓ ಡಾ.ಚಂದ್ರಶೇಖರ್, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಅಸ್ಗರ್ ಬೇಗ್, ಜಿಲ್ಲಾ ಸಂಘದ ಉಪಾಧ್ಯಕ್ಷ, ಎನ್‌ಪಿಎಸ್ ಸಂಘದ ಜಿಲ್ಲಾಧ್ಯಕ್ಷ ಮಂಜುನಾಥ್ ಡಿ.ಹೆಚ್, ಆರ್.ಎಂ.ಓ ಡಾ.ಅಶೋಕ್, ಅಧಿಕಾರಿಗಳಾದ ಡಾ.ಮೋಹನ್‌ಕುಮಾರ್, ಡಾ.ರಾಮೇಗೌಡ ಮತ್ತಿತರರು ಹಾಜರಿದ್ದು ಸ್ಪರ್ಧಾ ವಿಜೇತರನ್ನು ಅಭಿನಂದಿಸಿದರು.

# ಪತ್ರಿಕಾ ವಿತರಕರನ್ನ ಜನ ಸಾಮನ್ಯರು ಮಾತನಾಡಿಸುವಂತಾಗಬೇಕು

ತುಮಕೂರು: ಪತ್ರಿಕಾ ವಿತರಕರು ಪ್ರತಿನಿತ್ಯ ನಸುಕಿನ ಮುಂಜಾನೆಯಲ್ಲಿ ಎದ್ದು ಚಳಿ ಮಳೆ ಗಾಳಿ ಎನ್ನದೆ ತಮ್ಮ ಆರೋಗ್ಯವನ್ನು ಲೆಕ್ಕಿಸದೆ ಪ್ರತಿ ಮನೆ ಮನೆಗೂ ಪತ್ರಿಕೆಗಳನ್ನ ತಲುಪಿಸುತ್ತಾರೆ ವೃತ್ತಿಯಲ್ಲಿ ಪ್ರವೃತ್ತಿ ಎಂಬ ಉದ್ದೇಶದೊಂದಿಗೆ ಬೇರೆ ಬೇರೆ ಕೆಲಸದ ನಡುವೆಯೂ ತಪ್ಪದೇ ಪ್ರತಿನಿತ್ಯ ಪತ್ರಿಕೆಗಳನ್ನ ಸರಬರಾಜು ಮಾಡುತ್ತಾರೆ ಹಾಗಾಗಿ ಸರ್ಕಾರ ಸೂಕ್ತ ಯೋಜನೆ ರೂಪಿಸಿಬೇಕುಎಂದು ಸಿದ್ದರಬೆಟ್ಟದ ಬಾಳೆಹೊನ್ನೂರು ಶಾಖಾ ಮಠದ ಶ್ರೀ ಶ್ರೀ ವೀರಭದ್ರ ಶಿವಚಾರ್ಯ ಸ್ವಾಮೀಜಿ ಅವರು ತಿಳಿಸಿದರು.





ಕರ್ನಾಟಕ ರಾಜ್ಯ ಪತ್ರಿಕ ವಿತರಕರ ಒಕ್ಕೂಟದ ಸಂಯುಕ್ತ ಆಶ್ರಯದಲ್ಲಿ ಪ್ರಶಸ್ತಿ ಪ್ರಧಾನ ಸಮಾರಂಭ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ ನಗರ ಪ್ರದೇಶದಲ್ಲಿ ಬಡ ಕುಟುಂಬದ ವಿದ್ಯಾರ್ಥಿಗಳು ಕೂಡ ಪತ್ರಿಕೆಗಳನ್ನ ವಿತರಣೆ ಮಾಡಿ ಅದರಿಂದ ಬರುವ ಹಣವನ್ನ ತಮ್ಮ ವಿದ್ಯಾಭ್ಯಾಸಕ್ಕೆ ವಿನಯೋಗಿಸಿಕೊಂಡು ಸಾಧನೆ ಮಾಡಿರುವ ಘಟನೆಗಳು ನಮ್ಮ ಕಣ್ಣಮುಂದೆ ಇದೆ ಹೀಗಾಗಿ ಪತ್ರಿಕಾ ಸರಬರಾಜು ದಾರರಿಗೆ ಸರ್ಕಾರ ಮತ್ತು ಜನಪ್ರತಿನಿಧಿಗಳು ವಿಶೇಷ ಸೌಲಭ್ಯ ಸಹಕಾರ ಯೋಜನೆಗಳನ್ನು ರೂಪಿಸಿ ಅವರ ಶ್ರೇಯೋಭಿವೃದ್ಧಿಗೆ ಮುಂದಾಗಬೇಕು ಎಂದು ತಿಳಿಸಿದರು.

ಹಿರಿಯ ಪತ್ರಿಕೆ ಸಂಪಾದಕ ರವಿಹೆಗಡೆ ಮಾತನಾಡಿ ತುಮಕೂರು ಆರ್ಥಿಕ ವೇಗವಾಗಿ ಬೆಳೆಯುವ ನಗರ ಕಾರಣ ಇಲ್ಲಿನ ವಾತಾವರಣ ದಿನ ಪತ್ರಿಕೆ ವಿತರಕರ ಬವಣೆ ಬಡತನವನ್ನು ನಾಟಕದ ಮೂಲಕಕಟ್ಟಿ ಕೊಟ್ಟಿದ್ದಾರೆ ಪತ್ರಿಕಾ ಸಂಪಾದಕರಗಳ ಬಗ್ಗೆ ಅನೇಕಸಿನಿಮಾ ಗಳಿವೆ ಆದರೆ ತೊಂಬತ್ತು ನಿಮಿಷಗಳ ನಿರಂತರ ವಾಗಿ ಭಾವ ತುಂಬಿ ಅಭಿನಯಿಸಿದ ವಿತರಕರ ನಾಟಕದಲ್ಲಿ ನವರಸಗಳು ಮೂಡಿವೆ ಇಂತಹ ನಾಟಕಗಳನ್ನು ರಾಜ್ಯಾದ್ಯಂತ ಪ್ರದರ್ಶನಗೊಳ್ಳುವ ಕೆಲಸವಾಗಬೇಕು ಇದಕ್ಕೆ ನಮ್ಮ ಸಹಕಾರವಿದೆ ಎಂದರು.

ಪತ್ರಿಕಾ ವಿತರಕರಿಗೆ ಅನೇಕ ಸೌಲಭ್ಯ ಸಹಕಾರ ಅಪಘಾತ ವಿಮೆ ಸೇರಿದಂತೆ ಪತ್ರಿಕಾರಂಗದ ಅಂಗ ವಾಗಿರುವ ವಿತರಕರಿಗೆ ಕೊಡಿಸುವ ಕೆಲಸ ಮಾಡಲಾಗುತ್ತಿದೆ ಇದರ ಜೊತೆಗೆ ಸರ್ಕಾರದ ಜನಪ್ರತಿನಿಧಿಗಳು ಪತ್ರಿಕೆ ಸಂಪಾದಕರುಗಳು ಸ್ಥಳೀಯ ಸಂಘ ಸಂಸ್ಥೆಗಳು ವಿತರಕರ ಧ್ವನಿಯಾಗಿ ನಿಲ್ಲಬೇಕು ಎಂದು ತಿಳಿಸಿದರು.

ಕೇಂದ್ರ ನಾಟಕ ಪ್ರಶಸ್ತಿ ಪುರ ಪುರಸ್ಕೃತ ಹಾಗೂ ಹಿರಿಯ ರಂಗಭೂಮಿ ಕಲಾವಿದ ಡಾಕ್ಟರ್ ಲಕ್ಷ್ಮಣ ದಾಸ್ ಅವರು ಮಾತನಾಡಿ ಪತ್ರಿಕ ವಿತರಕರು ಚಳಿಗಾಳಿ ಮಳೆ ಎನ್ನದೆ ಜೀವದ ಹಂಗು ತೊರೆದು ಪತ್ರಿಕೆ ವಿತರಣೆ ಮಾಡುತ್ತಾರೆ ಸರ್ಕಾರಗಳು ಇವರ ಪರವಾದ ಕಾನೂನು ಕಾಯ್ದೆಗಳನ್ನ ತಂದು ಇವರ ರಕ್ಷಣೆಗೆ ನಿಲ್ಲಬೇಕು ಎಂದು ಒತ್ತಾಯಿಸಿದರು.

ಹಾಲಪ್ಪ ಪ್ರತಿಷ್ಠಾನದ ಅಧ್ಯಕ್ಷ ರಾಜ್ಯ ಕೆಪಿಸಿಸಿ ಉಪಾಧ್ಯಕ್ಷ ಮುರುಳಿಧರ್ ಹಾಲಪ್ಪ ಅವರು ಮಾತನಾಡಿ ಪತ್ರಿಕೆಗಳು ಮನೆ ಮಾತದಂತೆ ವಿತರಕರ ಬಗ್ಗೆ ಜನಸಾಮಾನ್ಯರು ಮಾತನಾಡುವ ಅಂತಾಗಬೇಕು ಸಾಕಷ್ಟು ಪರಿಶ್ರಮ ಹಾಕಿ ಪತ್ರಿಕೆಗಳನ್ನ ವಿತರಿಸುವ ಈ ಶ್ರಮಜೀವಿಗಳಿಗೆ ಗೌರವ ನೀಡುವಂತಹ ಕೆಲಸ ಆಗಬೇಕು ಪ್ರತಿನಿತ್ಯ ವಿತರಕರು ಪಡುವ ಭವಣೆ ಕಷ್ಟಗಳನ್ನ ನಾಟಕದ ಮೂಲಕ ಸಾರ್ಥಕ ಗೊಳಿಸಿದ ತಂಡಕ್ಕೆ ಅಭಿನಂದನೆಗಳನ್ನು ತಿಳಿಸುತ್ತೇನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ರಂಗಬ್ರಹ್ಮ ಡಾ ಎಸ್ ಎಲ್ ಎನ್ ಸ್ವಾಮಿ ರಚನೆಯ ಪತ್ರಿಕಾ ವಿತರಕರ ಅಂತರಂಗ ದರ್ಶನದ ಏಕವ್ಯಕ್ತಿ ರಂಗ ಪ್ರಯೋಗ ನಸುಕಿನ ನೂಗ ಎಂಬ ಸದಾ ಭಿರುಚಿಯ ಸಂಶೋಧನಾತ್ಮಕ ನಾಟಕವನ್ನು ಆಯೋಜನೆ ಮಾಡಲಾಗಿತ್ತು ಪ್ರಜಾಪ್ರಭುತ್ವದ ನಾಲ್ಕನೇ ಅಂಗ, ಪ್ರಭಾವಶಾಲಿ ಮಾಧ್ಯಮದ ದಿನಪತ್ರಿಕೆಗಳನ್ನು ನಸುಕಿನ ಜಾವದಲ್ಲಿ ಎದೆಗೆ ಹೌಚಿಕೊಂಡು ಶ್ರದ್ದೆಯಿಂದ ಸೂರ್ಯೋದಯದ ಒಳಗಾಗಿ ಮನೆ ಮನೆಗೆ ಮನಗಳಿಗೆ ತಲುಪಿಸುವ ವೀರಯೋಧರ ವಿತರಕ ಬಳಗ ಮಳೆ ಚಳಿ ಗಾಳಿ ಬಿಸಿಲು ಎನ್ನದೆ ಸ್ವಂತ ವಿಚಾರಗಳಿಗೆ ಮಹತ್ವ ಕೊಡದೆ ರಜೆಯ ಮೋಜು ಮಾಡದೆ ನಿತ್ಯ ಕಾಯಕವನ್ನ ಯಜ್ಞಕಾರ್ಯದಂತೆ ಮುನ್ನಡೆಸುವ ಲಕ್ಷಾಂತರ ಪತ್ರಿಕಾ ವಿತರಕರ ಅಂತರಂಗದ ತೂಳಲಾಟದ ವಿಚಾರ ವಿದ್ಯಮಾನವನ್ನ ನಾಟಕದಲ್ಲಿ ಯಶಸ್ವಿಯಾಗಿ ಕಟ್ಟಿಕೊಡಲಾಯಿತು.

# ಅಧ್ಯಾಪಕರು ಸಂಶೋಧನಾ ಮನೋಭಾವವನ್ನು ಬೆಳೆಸಿಕೊಳ್ಳಬೇಕು

ತುಮಕೂರು: ಅಧ್ಯಾಪಕರು ಸಮಯವನ್ನು ವ್ಯರ್ಥ ಮಾಡದೆ ಹೆಚ್ಚು ಅಧ್ಯಯನಶೀಲರಾಗುವುದರ ಜೊತೆಗೆ ಸಂಶೋಧನೆಗಳನ್ನು ಮಾಡುವಂತ ಗುಣ ವನ್ನು ಬೆಳೆಸಿಕೊಳ್ಳಬೇಕು ಎಂದು ಸಾಹೇ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಡಾ. ಕೆ ಬಿ ಲಿಂಗೇಗೌಡ ತಿಳಿಸಿದರು




ನಗರದ ಶ್ರೀ ಸಿದ್ದಾರ್ಥ ತಾಂತ್ರಿಕ ಮಹಾವಿದ್ಯಾಲಯದಲ್ಲಿನ ಜಿ.ಪಿ ನೆಕ್ಸಾಸ್ ನಲ್ಲಿ ಆಯೋಜಿಸಿದ್ದಂತಹ "ಆರ್ ಅಂಡ್ ಡಿ ಆಕ್ಟಿವಿಟೀಸ್ ಅಂಡ್ ದ ಸ್ಕೋಪ್ ಆಫ್ ರಿಸರ್ಚ್" ಎಂಬ ವಿಷಯದ ಕುರಿತಾದ ಕಾರ್ಯಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು ಅಧ್ಯಾಪಕರು ಸದಾ ಸಂಶೋಧನೆಯಲ್ಲಿ ತಮ್ಮನ್ನ ತಾವು ತೊಡೆಸಿಕೊಂಡು ಹೊಸ ಹೊಸ ವಿಚಾರಗಳ ಬಗ್ಗ ಬೆಳಕು ಚೆಲ್ಲಬೇಕು. ಹೊಸ ಹೊಸ ಕೌಶಲ್ಯಗಳನ್ನು ಕಲಿತು ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ತಿಳಿಸಬೇಕು. ಉಪನ್ಯಾಸಕರು ಸದಾ ಚಟುವಟಿಕೆಯಿಂದ ಇದ್ದು ತಮ್ಮ ಆಸಕ್ತಿ ವಿಷಯದಲ್ಲಿ ಆಗುತ್ತಿರುವಂತಹ ಬದಲಾವಣೆಗಳು ಹಾಗೂ ಅಭಿವೃದ್ಧಿಯ ಕುರಿತಾಗಿ ಕಲಿಯುತ್ತಿದ್ದಾಗ ಮಾತ್ರ ಏನನ್ನಾದರೂ ಸಾಧಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಎಸ್‌ಎಸ್‌ಐಟಿ ಕಾಲೇಜಿನ ಪ್ರಾಂಶುಪಾಲರಾದ ಮಹಾಂತೇಶ್ ಎಂ. ನಡಕಟ್ಟಿ ಮಾತನಾಡಿ ಉಪನ್ಯಾಸಕರು ಪ್ರತಿನಿತ್ಯ ಅಧ್ಯಯನಶೀಲರಾಗಿ ಸಂಶೋಧನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಸಂಶೋಧನಾ ಲೇಖನಗಳನ್ನು ನಿಯತಕಾಲಿಕೆಗಲಲ್ಲಿ ಪ್ರಕಟಿಸಿ. ಈ ಮೂಲಕ ಹೊಸ ಹೊಸ ವಿಚಾರಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿದಾಗ ವಿದ್ಯಾರ್ಥಿಗಳ ಬೌದ್ಧಿಕ ಮಟ್ಟ ಹೆಚ್ಚಾಗುತ್ತದೆ. ಸಂಶೋಧನೆಗಳು ಹೊಸ ಹೊಸ ಆವಿಷ್ಕಾರಗಳಿಗೆ ಕಾರಣವಾಗಬಹುದು. ಹಾಗಾಗಿ ಉಪನ್ಯಾಸಗಳು ಸಮಯವನ್ನು ವ್ಯರ್ಥ ಮಾಡದೆ ಸಂಶೋಧನಾ ಕಾರ್ಯದಲ್ಲಿ ತೊಡಗಿಸಿಕೊಂಡು ಹೊಸ ವಿಚಾರಗಳ ಬಗ್ಗೆ ಬೆಳಕು ಚೆಲ್ಲಿ ಎಂದು ಹೇಳಿದರು.

ಕಾಲೇಜಿ ಸಂಶೋಧನಾ ಸಂಯೋಜಕರಾದ ಡಾ. ಶ್ರೀಕಂಠೇಶ್ವರ ಸ್ವಾಮಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಿಗೆ ಸಂಶೋಧನೆಯ ಕುರಿತಾಗಿ ತರಬೇತಿಯನ್ನು ನೀಡಿದರು

ಈ ಕಾರ್ಯಗಾರದಲ್ಲಿ ಕಾಲೇಜಿನ ಅಕಾಡೆಮಿಕ್ ಡೀನ್ ಡಾ. ರೇಣುಕಲತಾ, ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ ವಿಭಾಗದ ಮುಖ್ಯಸ್ಥರಾದ ಡಾ. ಪ್ರದೀಪ್ ಸೇರಿದಂತೆ ಕಾಲೇಜಿನ ಎಲ್ಲಾ ಸಹಾಯಕ ಪ್ರಾಧ್ಯಾಪಕರು ಹಾಜರಿದ್ದರು.

# 40,000ರೂ. ಲಂಚ ಪಡೆಯುವಾಗ ರೆಡ್‌ಹ್ಯಾಂಡಾಗಿ ಲೋಕಾಯುಕ್ತ ಬಲೆಗೆ ಬಿದ್ದ ಪಿ.ಎಸ್.ಐ.




ತುಮಕೂರು: ಪ್ರಕರಣವೊಂದರಲ್ಲಿ ವಶ ಪಡಿಸಿಕೊಂಡಿದ್ದ ವಾಹನ ಬಿಡುಗಡೆ ಮಾಡಲು ಲಂಚ ಸ್ವೀಕರಿಸುತ್ತಿದ್ದ ವೇಳೆ ತುಮಕೂರು ಗ್ರಾಮಾಂತರ ಪಿಎಸ್‌ಐ ಚೇತನ್ ಕುಮಾರ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.ಬೆಂಗಳೂರು ಮೂಲದ ವಕೀಲರ ವಾಹನ ಇದಾಗಿದ್ದು, ವಾಹನ ಬಿಡುಗಡೆಗೆ 1 ಲಕ್ಷ ರೂ.ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ನಿನ್ನೆ ರಾತ್ರಿ 11:30 ರ ಸುಮಾರಿಗೆ ಕ್ಯಾತಸಂದ್ರ ಬಳಿಯ ನಮಸ್ತೆ ತುಮಕೂರು ಹೋಟೆಲ್‌ನಲ್ಲಿ 40 ಸಾವಿರ ರೂ. ಲಂಚ ಪಡದುಕೊಳ್ಳುತ್ತಿದ್ದಾಗ ಪಿಎಸ್‌ಐ ಚೇತನ್ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾರೆ. ಲೋಕಾಯುಕ್ತ ಪೊಲೀಸರು, ಪಿಎಸ್‌ಐಯನ್ನು ವಿಚಾರಣೆ ನಡೆಸಿ ನ್ಯಾಯಾಲಯಕ್ಕೆ ಒಪ್ಪಿಸಿದ್ದಾರೆ.

## SP NEWS ಸಣ್ ಸುದ್ದಿ

## ಇಂದು ಮಡಿವಾಳ ಮಾಚಿದೇವ ಜಯಂತಿ

ತುಮಕೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಜಿಲ್ಲಾ/ ತಾಲ್ಲೂಕು ಮಡಿವಾಳ ಸಂಘದ ವತಿಯಿಂದ ಇಂದು ಬೆಳಿಗ್ಗೆ 11 ಗಂಟೆಗೆ ನಗರದ ಡಾ: ಗುಬ್ಬಿವೀರಣ್ಣ ಕಲಾಕ್ಷೇತ್ರದಲ್ಲಿ "ಶ್ರೀ ಮಡಿವಾಳ ಮಾಚಿದೇವ ಜಯಂತಿ" ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಕೇಂದ್ರ ಸಚಿವ ವಿ.ಸೋಮಣ್ಣ ,ಗೃಹ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ: ಜಿ.ಪರಮೇಶ್ವರ ಕಾರ್ಯಕ್ರಮವನ್ನು ಉದ್ಘಾಟಿಸುವರು. ಚಿತ್ರದುರ್ಗ ಶ್ರೀ ಮಾಚಿದೇವ ಮಹಾಸಂಸ್ಥಾನ ಮಠದ ಪೀಠಾಧಿಪತಿ ಜಗದ್ಗುರು ಡಾ: ಶ್ರೀ ಬಸವ ಮಾಚಿದೇವ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸುವರು. ನಗರ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಬಿ.ಜ್ಯೋತಿಗಣೇಶ್ ಅಧ್ಯಕ್ಷತೆವಹಿಸುವರು. ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧ ಸಚಿವರು, ಶಾಸಕರು, ಜನಪ್ರತಿನಿಧಿಗಳು, ಮಡಿವಾಳ ಸಮುದಾಯದ ಸಂಘ-ಸಂಸ್ಥೆಗಳ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು ಹಾಗೂ ಮುಖಂಡರು ಭಾಗವಹಿಸಲಿದ್ದಾರೆ.

## ಮಾ.15ರವರೆಗೆ ವಿಶೇಷ ನೋಂದಣಿ ಅಭಿಯಾನ

ತುಮಕೂರು: ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್-ಧನ್ ಹಾಗೂ ಎನ್‌ಪಿಎಸ್-ಟ್ರೇಡರ್ಸ್ ಯೋಜನೆಯಡಿ ಅಸಂಘಟಿತ ವಲಯದ ಕಾರ್ಮಿಕರು, ವ್ಯಾಪಾರಿಗಳು ಹಾಗೂ ಸ್ವಯಂ ಉದ್ಯೋಗಿಗಳನ್ನು ನೋಂದಾಯಿಸಲು ಮಾರ್ಚ್ 15ರವರೆಗೆ "ವಿಶೇಷ ನೋಂದಣಿ ಅಭಿಯಾನ"ವನ್ನು ಹಮ್ಮಿಕೊಳ್ಳಲಾಗಿದೆ.

ಈ ಯೋಜನೆಯಡಿ 18 ರಿಂದ 40 ವರ್ಷದೊಳಗಿನ ಅಸಂಘಟಿತ ಕಾರ್ಮಿಕರು ನೋಂದಾಯಿಸಿಕೊಳ್ಳಬಹುದಾಗಿದೆ. ವಯಸ್ಸಿಗನುಗುಣವಾಗಿ ಮಾಸಿಕ 55 ರಿಂದ 200 ರೂ.ಗಳವರೆಗೆ ವಂತಿಕೆ ಪಾವತಿ ಮಾಡಬೇಕು. ಕೇಂದ್ರ ಸರ್ಕಾರದ ವತಿಯಿಂದ ಅಷ್ಟೇ ವಂತಿಕೆ ಪಾವತಿಸಿ ಬ್ಯಾಂಕ್ ಖಾತೆಯಲ್ಲಿ ಸದರಿ ಮೊತ್ತವನ್ನು ಸಂಗ್ರಹಿಸಲಾಗುತ್ತದೆ. 60 ವರ್ಷ ಪೂರ್ಣಗೊಂಡ ನಂತರ ಮಾಸಿಕ 3,000 ರೂ. ಪಿಂಚಣಿ ಸೌಲಭ್ಯ ಪಡೆಯಬಹುದಾಗಿದೆ.

ಯೋಜನೆಯಡಿ ನರೇಗಾ ಕಾರ್ಮಿಕರು, ಎಸ್‌ಹೆಚ್‌ಜಿ ಸದಸ್ಯರು, ಕೃಷಿ ಕಾರ್ಮಿಕರು, ಅಂಗನವಾಡಿ ಕಾರ್ಮಿಕರು, ಮಧ್ಯಾನದ ಬಿಸಿ ಊಟದ ಕಾರ್ಮಿಕರು, ಆಶಾ ಕಾರ್ಯಕರ್ತೆಯರು, ಬೀದಿ ಬದಿ ವ್ಯಾಪಾರಿಗಳು, ಗೃಹ ಕಾರ್ಮಿಕರು, ಮೀನುಗಾರರು, ಇನ್ನಿತರೆ ಅಸಂಘಟಿತ ವಲಯಗಳ ಕಾರ್ಮಿಕರು ಹಾಗೂ ವ್ಯಾಪಾರಿಗಳು ತಮ್ಮ ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಪುಸ್ತಕ ಹಾಗೂ ಮೊದಲ ತಿಂಗಳ ವಂತಿಕೆಯೊಂದಿಗೆ ಸಮೀಪದ ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ನೋಂದಣಿಯಾಗಿ ಯೋಜನೆಯ ಸದುಪಯೋಗ ಪಡೆದುಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕಾರ್ಮಿಕ ಇಲಾಖೆಯ ಅಧಿಕಾರಿಗಳು, ಆಯಾ ತಾಲ್ಲೂಕಿನ ಕಾರ್ಮಿಕ ನಿರೀಕ್ಷಕರನ್ನು ಸಂಪರ್ಕಿಸಬಹುದಾಗಿದೆ ಎಂದು ಕಾರ್ಮಿಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶ್ರೀ ಸಿದ್ದಾರ್ಥ ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರದಿಂದ ವಿವಿಧ ದ್ಯೆಯೋದ್ದೇಶಗಳೊಂದಿಗೆ ತರಬೇತಿ ಕಾರ್ಯಕ್ರಮ

ತುಮಕೂರು; ಶ್ರೀಸಿದ್ದಾರ್ಥ ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರದಲ್ಲಿ ಸರ್ಕಾರದ ಮಾರ್ಗಸೂಚಿಗಳನುಸಾರ ಅನುಮೋದಿತ ಚಟುವಟಿಕೆಗಳಡಿ ಸುವರ್ಣ ಕಾಯಕ ಕೌಶಲ್ಯಾಭಿವೃದ್ಧಿ ಯೋಜನೆಯ ತರಬೇತಿ ಕಾರ್ಯಕ್ರಮವನ್ನ ವಿವಿಧ ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ನೀಡಲಾಗುವುದೆಂದು ಸಿದ್ದಾರ್ಥ ಕೌಶಲ್ಯಭಿವೃದ್ಧಿ ತರಬೇತಿ ಕೇಂದ್ರದ ನಿರ್ದೇಶಕರು ತಿಳಿಸಿದ್ದಾರೆ.

ತರಬೇತಿ ಕೇಂದ್ರದ ಮೂಲಕ ಟ್ರೈಲರಿಂಗ್(ಬೇಸಿಕ್ ಯಿಂಗ್ ಮೆಷಿನ್ ಆಪರೇಷನ್) ಗಣಕವಿಜ್ಞಾನ(ಬೇಸಿಕ್ ಕಂಪ್ಯೂಟರ್).ಸಿ.ಎನ್.ಸಿ.ಮೆಷಿನ್ಪ್ರೋಗ್ರಾಮ್, ಹ್ಯಾಂಡ್ ಎಂಬ್ರಾಯಿಡರಿ &ಜರದೋಷಿ ವರ್ಕ್ಸ ಹಾಗೂಎಲೆಕ್ಟ್ರಿಕ್ (ವಿದ್ಯುತ್) ಉಪಕರಣಗಳ ದುರಸ್ತಿ : ನಿರ್ವಹಣೆ ಚಟುವಟಿಕೆಗಳಡಿ ಉದ್ಯೋಗಿ: ಸ್ವಯಂ-ಉದ್ಯೋಗಿಗಳಾಗಲು ಸಹಕಾರಿಯಾಗುವ ತರಬೇತಿಗಳನ್ನು ನೀಡಲಾಗುತ್ತಿದ್ದು

ಪ್ರಸ್ತುತ ಸಾಲಿನಿಂದ ಶ್ರೀ ಸಿದ್ದಾರ್ಥ ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರದಲ್ಲಿ ತರಬೇತಿ ಬೋಧನೆಗಾಗಿ ನುರಿತ ಭೋಧಕರ ಮೂಲಕ ಯಶಸ್ವಿ ತರಬೇತಿ ಕಾರ್ಯಕ್ರಮ ಅನುಷ್ಠಾನತ ಮಾಡುತ್ತಿದ್ದು ತರಬೇತಿ ಕೇಂದ್ರದಲ್ಲಿ ಪೂರ್ಣಾವಧಿ ತರಬೇತಿಗಾಗಿ ಪ್ರತಿ ಅಭ್ಯರ್ಥಿಗೆ ಬೋಧನಾ ಶುಲ್ಕ ರೂ.1000/-ಗಳ ನಿಗಧಿಪಡಿಸಿಲಾಗುದೆ ಅದರಂತೆ ಜಿಲ್ಲೆಯಾದ್ಯಂತ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿರುವ ವಿದ್ಯಾವಂತ ನಿರುದ್ಯೋಗಿ ಯುವಕ- ಯುವತಿಯರಿಗೆ ನಿರುದ್ಯೋಗ ನಿವಾರಣೆಗಾಗಿ ಪೂರ್ಣಾವಧಿಯ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಫಲಾನುಭವಿಗಳು ಸರ್ಕಾರದ ವಿವಿಧ ಯೋಜನೆಗಳಡಿ ದೊರೆಯುವ ಸಹಾಯಧನವುಳ್ಳ ಹಣಕಾಸಿನ ನೆರವಿನೊಂದಿಗೆ ನೀರುದ್ಯೋಗಿಗಳು ಉದ್ಯೋಗಿಗಳಾಗ ಬಹುದಾಗಿದೆ.ಎಂದು ಸಿದ್ದಾರ್ಥ ಕೌಶಲ್ಯ ಅಭಿವೃದ್ಧಿ ತರಬೇತಿ ಸಂಸ್ಥೆ ನಿರ್ದೇಶಕ ಡಾ.ಮನು ಎಸ್ ಅವರು ಪತ್ರಿಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕುಷ್ಟರೋಗ ಎಂದರೆ ಭಯ ಬೇಡ

ಶಿರಾ ತಾಲೂಕಿನ ಗೌಡಗೆರೆ ಹೋಬಳಿಯ ಚಂಗಾವರ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಆರೋಗ್ಯ ಇಲಾಖೆ ಶುಕ್ರವಾರ ಆಯೋಜಿಸಿದ್ದ ಕುಷ್ಟರೋಗ ನಿವಾರಣ ಮಾಸಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಗ್ರಾಮೀಣ ಪ್ರದೇಶದ ರೈತ ಮತ್ತು ಕಾರ್ಮಿಕರು ಹೆಚ್ಚು ಶ್ರಮ ಜೀವಿಗಳಾಗಿದ್ದು, ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕು, ಮೈಮೇಲೆ ತಾಮ್ರ ವರ್ಣದ ಮಚ್ಚೆಗಳು ಕಂಡು ಬಂದರೆ ಸಮೀಪದ ವೈದ್ಯರನ್ನು ಸಂಪರ್ಕಿಸಿ ಸೂಕ್ತ ಚಿಕಿತ್ಸೆ ಪಡೆದರೆ ಕ್ರಮೇಣ ಕುಷ್ಟರೋಗ ನಿವಾರಣೆ ಸಾಧ್ಯ, ಆತಂಕ ಪಡುವ ಪ್ರಮೇಯವಿಲ್ಲ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ವೈದ್ಯಾಧಿಕಾರಿ ಡಾ.ಕೆ.ಜೆ. ತಿಮ್ಮರಾಜು ಕುಷ್ಟರೋಗದ ಬಗ್ಗೆ ಭಯ ಬೇಡ, ಸ್ಪರ್ಶ ವಿಲ್ಲದ , ತಾಮ್ರ ವರ್ಣದ ಮಚ್ಚೆಗಳು ದೇಹದ ಯಾವ ಭಾಗದಲ್ಲಿ ಕಂಡುಬಂದರೂ ಸಹ ಯಾವುದೇ ಮುಜುಗರ , ಸಂಕೋಚದಿಂದ ಮುಚ್ಚಿಡದೆ ಸರ್ಕಾರಿ ವೈದ್ಯರ ಬಳಿ ತಪಾಸಣೆ ಪಡಿಸಿಕೊಳ್ಳಬೇಕು, ಒಂದು ವೇಳೆ ಕುಷ್ಠ ರೋಗ ಎಂದು ದೃಢಪಟ್ಟರು ಸಹ ಸೂಕ್ತ ಚಿಕಿತ್ಸೆ ಉಚಿತವಾಗಿ ದೊರೆಯಲಿದೆ. ಕುಷ್ಟರೋಗಮುಕ್ತ ಭಾರತ ನಮ್ಮ ಸಂಕಲ್ಪ ಎಂದರು.

ಮುಖ್ಯ ಶಿಕ್ಷಕ ಮಹಾಲಿಂಗಪ್ಪ ಮಾತನಾಡಿ ಕುಷ್ಟರೋಗದ ಬಗ್ಗೆ ವಿದ್ಯಾರ್ಥಿಗಳು ಗ್ರಾಮಗಳಲ್ಲಿ ಅರಿವು ಮೂಡಿಸಬೇಕು, ಅಂತಹ ರೋಗ ಲಕ್ಷಣ ಕಂಡು ಬಂದರೆ ವೈದ್ಯರ ಸಲಹೆ ಪಡೆಯಿರಿ ಎಂಬ ಮಾಹಿತಿ ನೀಡಬೇಕು ಎಂದರು.

ಆರೋಗ್ಯ ಇಲಾಖೆಯ ರಘು, ನಿರಂಜನ್, ರೋಜ, ವಿಜಯಲಕ್ಷ್ಮಿ, ಶಿಕ್ಷಕರಾದ ಮಂಜುನಾಥ ಸ್ವಾಮಿ, ಪ್ರಕಾಶ್ ,ದೇವರಾಜು, ಸುಮಿತ್ರ ,ನಟರಾಜು, ಜಗದೀಶ್ ,ಜಯ ಲಕ್ಷ್ಮಿ, ಆರೋಗ್ಯ ಕಾರ್ಯಕರ್ತೆ ಲಲಿತಮ್ಮ ಸೇರಿದಂತೆ ಆಶಾ ಕಾರ್ಯಕರ್ತರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA . SUB EDITOR- A.S.BANUPRAKASH CONTACT : 9901010109 GMAIL: suryapragathi2021@gmail.com.